ವಿಜಯಪುರ | ಸಂಪುಟ 04 | ಸಂಚಿಕೆ 124 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಜುಲೈ, 05, 2026




"ಅಂದು ಅಧಿಕಾರಕ್ಕಾಗಿ ಮೇಕೆದಾಟು ಪಾದಯಾತ್ರೆ ನಾಟಕವಾಡಿದ ಡಿ.ಕೆ.ಶಿವಕುಮಾರ್ ಈಗ ತಮಿಳುನಾಡು ಕಾಂಗ್ರೆಸ್ ಮುಂದೆ ಮೌನವ್ರತ ಮಾಡುತ್ತಿರುವುದೇಕೆ? ಚುನಾವಣೆಗೆ ಮುನ್ನ ಪಾದಯಾತ್ರೆಯ ಬೀದಿನಾಟಕ ಮಾಡಿದ್ದಿರಲ್ಲ ಸ್ವಾಮಿ, ಈಗೇಕೆ ಮೌನಕ್ಕೆ ಶರಣಾಗಿದ್ದೀರಿ?"

■ ಆರ್. ಅಶೋಕ
ವಿಧಾನಸಭೆ ವಿಪಕ್ಷ ನಾಯಕರು


# ಕಾಶ್ಮೀರ ಸೇಬು ಬೆಳೆದು ಮಾದರಿಯಾದ ಆರಕ್ಷಕ ಭೀಮು

## ಮೋರಟಗಿ ಗ್ರಾಮದಲ್ಲಿ ಖಾಕಿ ಕಾಯಕದ ಜತೆಗೆ ಕೃಷಿ। ವರ್ಷಕ್ಕೆ ರೂ.6 ಲಕ್ಷಕಿಂತಲೂ ಅಧಿಕ ಲಾಭ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ದು ಕೆರಿಗೊಂಡ





ಮೋರಟಗಿ: ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕಾರ್ಯ ನಿರ್ವಹಿತ್ತಿರುವ ಸಮೀಪದ ನಾಗಾವಿ ತಾಂಡಾದ ಭೀಮು ಲಮಾಣಿ ತಮ್ಮ ಗದ್ದೆಯಲ್ಲಿ ಕಾಶ್ಮೀರ ಸೇಬು ಬೆಳೆದು ಗುಮ್ಮಟ ನಗರಿ ಜಿಲ್ಲೆಯಲ್ಲಿ ಸದ್ದು ಮಾಡಿದ್ದಾರೆ.

ಮೋರಟಗಿ ಹೊರ ಠಾಣೆಯಲ್ಲಿ ಪೊಲೀಸ್ ಪೇದೆಯ ಹುದ್ದೆಯಲ್ಲಿ ಶಿಸ್ತಿನ ಸಿಪಾಯಿ ಎಂದೆನಿಸಿ ಬಿಡುವಿನ ವೇಳೆಯಲ್ಲಿ ವೃಥಾ ಕಾಲಹರಣ ಮಾಡದೇ ಸ್ವತಃ ಅಗಿ ನೆಡೆಸಿ, ನೀರು ಉಣಿಸಿ, ತೆಂಗಿನ ಮರ, ಮಾವಿನ ಮರಗಳ ಜತೆಗೆ ಇತರ ಸಸಿ ನೆಡಿಸಿ ಪರಿಸರ ಪ್ರೇಮಿಯಾಗಿ ಕೂಡ ಇವರು ಹೆಸರುವಾಸಿಯಾಗಿದ್ದಾರೆ.

ಮೋರಟಗಿ ಪೊಲೀಸ್ ಹೊರ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತ ಸಿಕ್ಕ ಸಮಯದಲ್ಲಿ ನಾಲ್ಕು ಎಕರೆ ಜಮೀನಿನಲ್ಲಿ ತೆಂಗಿನ ಮರ, ಸೇಬುಹಣ್ಣು, ತರಕಾರಿ ಸೇರಿದಂತೆ ಅನೇಕ ಸಸಿಗಳನ್ನು ಬೆಳೆಸಿ ವರ್ಷಕ್ಕೆ 6 ಲಕ್ಷಕಿಂತಲೂ ಅಧಿಕ ಲಾಭ ಪಡೆದು, ಪ್ರಗತಿಪರ ರೈತರ ಗಮನ ಸೆಳೆಯುವಂತೆ ಮಾಡಿದ ಪೊಲೀಸ್ ಪೇದೆ ಭೀಮು ಲಮಾಣಿ ಅವರಿಗೆ ಗ್ರಾಮದ ಮಾಜಿ ಜಿಲ್ಲಾ ಪಂಚಾಯತ ಸದಸ್ಯ ಎನ್ ಆರ್ ತಿವಾರಿ, ಹಿರಿಯರಾದ ಮೈಬೂಸಾಬ ಕಣ್ಣಿ, ರೈತ ಸಂಘದ ಜಿಲ್ಲಾ ಅಧ್ಯಕ್ಷ ಅಣ್ಣಾರಾಯ ಇಳಗೇರ, ಸಿಂದಗಿ ಪಿಎಸ್ ಐ ಶ್ರೀಕಾಂತ್ ಕಾಂಬಳೆ ಸಿಬ್ಬಂದಿ ವರ್ಗ ಹಾಗೂ ಈ ಭಾಗದ ಪ್ರಗತಿಪರ ರೈತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ಭೀಮು ಲಮಾಣಿ ಪೊಲೀಸ್ ಪೇದೆ**

ನಮ್ಮ ತಂದೆಯವರು ಕೃಷಿಕರು ಅಸ್ತಿ ಕಡಿಮೆ ಇದ್ದರೂ ಕೂಡಾ ಕೃಷಿಯನ್ನೇ ನಂಬಿಕೊಂಡು ಜೀವನ ಸಾಗಿಸುವ ಸಂದರ್ಭದಲ್ಲಿ ಅನಾರೋಗ್ಯದಿಂದ ನಾನು ನಾಲ್ಕು ವರ್ಷದ ಮಗು ಇರುವಾಗಲೇ ನಮ್ಮ ತಾಯಿಯನ್ನು ಕಳೆದುಕೊಂಡೆ ಕಷ್ಟ ಪಟ್ಟು ದುಡಿದ ಹಣದಲ್ಲಿ ವಿದ್ಯಾಭ್ಯಾಸ ಮಾಡಿ ಪೊಲೀಸ್ ಹುದ್ದೆಗೆ ಸೇರಿದೆ ಈ ನನ್ನ ಎಲ್ಲ ಸಾಧನೆಗೆ ನನ್ನ ತಾಯಿಯ ಆಶೀರ್ವಾದ ಜಗತ್ತಿನಲ್ಲಿ ದೇವರ ಆಶೀರ್ವಾದಕಿಂ-ತ ತಾಯಿಯ ಆಶೀರ್ವಾದ ಮುಖ್ಯ ಎಲ್ಲರು ತಂದೆ ತಾಯಿಯನ್ನು ಗೌರವಿಸಿ ಇತರ ಕಾರ್ಯಗಳ ಜೊತೆಗೆ ಕೃಷಿಗೂ ಆದ್ಯತೆ ನೀಡಿ.

# ರಾಜ್ಯದಲ್ಲಿ ಕಾಂಗ್ರೆಸ್-ಬಿಜೆಪಿ ಮಧ್ಯೆ ಎಸ್ಐಆರ್ ಜಟಾಪಟಿ

## ಆಡಳಿತಾರೂಢ ಕಾಂಗ್ರೆಸ್ಸಿಂದ ಅಧಿಕಾರಿಗಳ ಮೇಲೆ ಒತ್ತಡದ ಆರೋಪ। ರಾಜ್ಯ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು



ಬೆಂಗಳೂರು: ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(-ಎಸ್ಐಆರ್)ಗೆ ಸಂಬಂಧಿಸಿದಂತೆ ಆಡಳಿತರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ನಡುವೆ ತೀವ್ರ ಜಟಾಪಟಿ ನಡೆಯುತ್ತಿದ್ದು, ಈ ಸಂಬಂಧ ಕೇಸರಿ ಪಕ್ಷ ಶನಿವಾರ ರಾಜ್ಯ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಆಡಳಿತಾರೂಢ ಕಾಂಗ್ರೆಸ್, ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದೆ ಮತ್ತು ಬೂತ್ ಮಟ್ಟದ ಅಧಿಕಾ-ರಿಗಳನ್ನು(ಬಿಎಲ್ಒ) ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಅವರು ಶನಿವಾರ ಹಿರಿಯ ಬಿಜೆಪಿ ಶಾಸಕ ಮತ್ತು ಮಾಜಿ ಸಚಿವ ಎಸ್ ಸುರೇಶ್ ಕುಮಾರ್ ಅವರೊಂದಿಗೆ ಮುಖ್ಯ ಚುನಾವಣಾ ಅಧಿಕಾರಿಯನ್ನು ಭೇಟಿ ಮಾಡಿ ಪಕ್ಷದ ಪರವಾಗಿ ದೂರು ಸಲ್ಲಿಸಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಕೇಂದ್ರ ಚುನಾವಣಾ ಆಯೋಗವು ನಮ್ಮ ರಾಜ್ಯದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಉತ್ತಮ ಉದ್ದೇಶದಿಂದ ಪ್ರಾರಂಭಿಸಿದೆ. ಆದ-'ರೆ ರಾಜ್ಯ ಸರ್ಕಾರ ಈ ಪ್ರಕ್ರಿಯೆಯನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

"ಇಂದು, ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್ಒ) ಮೇಲೆ ಒತ್ತಡ ಹೇರಲಾಗುತ್ತಿದೆ ಮತ್ತು ಅವರನ್ನು ದುರ ುಪಯೋಗಪಡಿಸಿಕೊಳ್ಳಲಾಗುತ್ತಿದೆ" ಎಂದು ವಿಜಯೇಂದ್ರ ಆರೋಪಿಸಿದರು.

ಎಸ್ಐಆರ್ ಪ್ರಕ್ರಿಯೆಯಡಿಯಲ್ಲಿ, ಅಧಿಕಾರಿಗಳು ಮನೆ ಮನೆಗೆ ಹೋಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಅವರು ಹೇಳಿದರು.

ಚುನಾವಣಾ ಆಯೋಗ ತಕ್ಷಣ ಮಧ್ಯ ಪ್ರವೇಶ ಮಾಡಬೇಕು. ಈ ಕುರಿತಾದ ವಿವರಗಳನ್ನು ಸಾಕ್ಷಿ ಸಮೇತ ದೂರು ನೀಡಿದ್ದೇವೆ. ರಾಜ್ಯದಲ್ಲಿನ ಕಾಂಗ್ರೆಸ್ ವ್ಯವಸ್ಥೆ ಹಾಳು ಮಾಡುವ ಕೆಲಸ ಮಾಡ್ತಿದ್ದಾರೆ ಎಂದು ಕಿಡಿಕಾರಿದರು.

ನಮ್ಮ ಪಕ್ಷದ ಬಿ ಎಲ್ ಎ ಗಳ ಗಮನಕ್ಕೆ ತರದೇ ಶಾಸಕರ ಕಚೇರಿಯಲ್ಲಿ, ಮಸೀದಿಯಲ್ಲಿ ಎಸ್ ಐ ಆರ್ ಪ್ರಕ್ರಿಯೆ ಆಗಿದೆ. ಹೀಗಾದಾಗ ಸಮಸ್ಯೆ ಆಗಿದೆ. ಈ ವಿಚಾರವನ್ನು ಕೇಂದ್ರ ಚುನಾವಣಾ ಆಯೋಗದ ಗಮನಕ್ಕೆ ತರಲು ಮನವಿ ಮಾಡಿದ್ದೇವೆ ಎಂದರು.

### ರಾಜ್ಯ ಚುನಾವಣಾ ಆಯೋಗ ಕಾಂಗ್ರೆಸ್ ಸರ್ಕಾರದ ಕೈಗೊಂಬೆ



ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡಗಳಲ್ಲಿ ಎಸ್ಐಆರ್ ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದ್ದಾರೆ.

ರಾಜ್ಯದಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ವಿಶೇಷ ಮತಪಟ್ಟಿ ಪರಿಷ್ಕರಣೆ (ಎಸ್ಐಆರ್) ನಡೆಸುತ್ತಿದೆ. ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ರಾಜ್ಯ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು.

# ಜು.11-12 ರಂದು ವಿಜಯಪುರದಲ್ಲಿ ಬ್ರಾಹ್ಮಣ ವಧು-ವರರ ಸಮಾವೇಶ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸಪ್ತಪತಿ ಫೌಂಡೇಶನ್ ಮಂಗಳಸೂತ್ರ ಫೌಂಡೇಶನ್ ಹಾಗೂ ಶ್ರೀ ಶಿವಚಿದಂಬರ ಸೇವಾ ಸಮಿತಿ ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಸಹಯೋಗದಲ್ಲಿ ಇದೇ ಜುಲೈ11-12 ರಂದು ನಗರದ ರಿಂಗ್ ಮನಗೂಳಿ ರಸ್ತೆಯಲ್ಲಿರುವ ಶ್ರೀ ಚಿದಂಬರೇಶ್ವರ ಸಾಂಸ್ಕೃತಿ-ಕ ಭವನದಲ್ಲಿ ರಾಜ್ಯಮಟ್ಟದ ತ್ರಿಮತಸ್ಥ ಬ್ರಾಹ್ಮಣ ವಧು-ವರರ ವರಾನ್ವೇಷಣಾ ಸಮಾವೇಶ ಹಾಗೂ ಲೋಕಕಲ್ಯಾಣಾರ್ಥವಾಗಿ ಶ್ರೀ ಗಿರಿಜಾ ಕಲ್ಯಾಣೋತ್ಸವ ಮಹಾ ಸಂಕಲ್ಪ ಜರುಗಲಿದೆ ಎಂದು ಸಪ್ತಪದಿ ಫೌಂಡೇಶನ್ ಟ್ರಸ್ಟನ ಸಂಚಾಲಕ ಶ್ರೀನಿವಾಸ ಭಾರದ್ವಾಜ ತಿಳಿಸಿದರು.

ರಾಜ್ಯದಲ್ಲಿನ ಎಲ್ಲ ಬ್ರಾಹ್ಮಣ ವಧು-ವರ-ರಿಗೆ ಮದುವೆ ಆಗಬೇಕೆಂಬ ಉದ್ದೇಶದಿಂದ ವಿಜಯಪುರ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳು ಜನರಿಗೆ ಅನುಕೂಲ ಆಗಲು ಅಲ್ಲಿಯೇ ಮದುವೆ ಹೊಂದಾಣಿಕೆ ನಡೆಸಲು ಉದ್ದೇಶಿಸಲಾಗಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾರಂಭವನ್ನು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ದಿವ್ಯ ಸಾನ್ನಿಧ್ಯವನ್ನು ಪಂಡಿತ ಮಧ್ವಾಚಾರ್ಯ ಮೋಕಾಶಿ, ಅಗಡಿ ಆನಂದವನದ ವಿಶ್ವನಾಥ ಚಕ್ರವರ್ತಿ, ಶ್ರೀನಿವಾಸನ್ ಗುರೂಜಿ, ಕೃಷ್ಣ ಭಟ್ ಗಲಗಲಿ, ಸತೀಶಚಂದ್ರ ಕುಲಕರ್ಣಿ, ಚಿದಂಬರೇಶ್ವರ ಸೇವಾ ಸಮಿತಿ ಅಧ್ಯಕ್ಷ ಲಕ್ಷ್ಮಿಕಾಂತ ಕುಲಕರ್ಣಿ ಸೇ-ರಿದಂತೆ ಅನೇಕ ಪಾಲ್ಗೊಳ್ಳಲಿದ್ದಾರೆಂದು ಹೇಳಿದರು.

ನಮ್ಮ ಸಪ್ತಪತಿ ಮಂಗಳಸೂತ್ರ ಫೌಂಡೇಶನ್ ವತಿಯಿಂದ ಅತಿ ಹೆಚ್ಚು ಮದುವೆಗಳು ನಡೆದಿದ್ದು, ಅನೇಕ ಬಡ ಹೆಣ್ಣು ಮಕ್ಕಳಿಗೆ ಉಚಿತವಾಗಿ ಮದುವೆ ಮಾಡಿಸಲಾಗಿದೆ. ಈಗ ನಾವೇ ಮದುವೆ ಮಾಡಿಸಲು ಮುಂದೆ ಬಂದರೂ ವಧುಗಳ ಪಾಲಕರು ಬರುತ್ತಿಲ್ಲ ಎಂದು ತಿಳಿಸಿದರು.

ಬ್ರಾಹ್ಮಣ ಕ್ಷೇಮಾಭಿವೃದ್ಧಿ ರಾಜ್ಯಾಧ್ಯಕ್ಷ ಆನಂದ ಜೋಶಿ ಮಾತನಾಡಿ,ಬ್ರಾಹ್ಮಣ ವಧು-ವರರು ವೈವಾಹಿಕ ಜೀವನಕ್ಕೆ ಪಾದರ್ಪಣೆ ಮಾಡಲು ವೇದಿಕೆ ಬೇಕು ಅದು ಸಪ್ತಪದಿ ಮಂಗಳಸೂತ್ರ ಫೌಂಡೇಶನ್ ಮಾಡುತ್ತಿದೆ. ಪ್ರತಿ ಜಿಲ್ಲೆಯಲ್ಲಿಯೂ ಬ್ರಾಹ್ಮಣ ವಧು-ವರರ ಸಮಾವೇಶಕ್ಕೆ ಎಲ್ಲ ಬ್ರಾಹ್ಮಣ ಸಂಘಟನೆಗಳು ಬೆಂಬಲ ನೀಡಲಿವೆ ಎಂದರು.

ಹಿರಿಯ ಪೇಜಾವರ ವಿಶ್ವೇಶ್ವರ ತೀರ್ಥ ಶ್ರೀಗಳು ಉತ್ತರ ಪ್ರದೇಶದ ಬಡ ಬ್ರಾಹ್ಮಣ ವಧುಗಳನ್ನು ಕರ್ನಾಟಕದಲ್ಲಿನ ವರರಿಗೆ ಮದುವೆ ಮಾಡಿಲು ಅನುಮತಿ ನೀಡಿದ್ದರು. ಅದರಂಗವಾಗಿ ಉತ್ತರ ಪ್ರದೇಶದ ವಧುಗಳನ್ನು ಕರೆತರುವ ಪ್ರಯತ್ನ ಜಾ-ರಿಯಲ್ಲಿದೆ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಪ್ರತಿನಿಧಿ ಸತೀಶ್ಚಂದ್ರ ಕುಲಕರ್ಣಿ ಮಾತನಾಡಿ, ಜು.11-12 ರಂದು ನಡೆಯುವ ವಧು-ವರರ ಸಮಾವೇಶದಲ್ಲಿ ಶುಲ್ಕ ಉಚಿತವಾಗಿದ್ದು, ವಧು-ವರರ ಬಯೋಡೆಟಾ ಪೋಸ್ಟ ಕಾರ್ಡ ಫೋಟೊ ಹಾಗೂ ಜಾತಕದೊಂದಿಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ವಧುಗಳ ಪಾಲಕರು ಕೇವಲ ಬೆಂಗಳೂರು ಸಾಫ್ಟವೇರ್ ಕಂಪನಿಗಳ ವರರರನ್ನು ಹುಡಕದೇ ಸ್ಥಳೀಯವಾಗಿ ಒಳ್ಳೆಯ ಉದ್ಯೋಗ ಹಾಗೂ ವ್ಯಾಪಾರದವರಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಸಲು ಮುಂದೆ ಬರಬೇಕು ಎಂದು ವಿನಂತಿ ಮಾಡಿದರು.

ಬ್ರಾಹ್ಮಣರಲ್ಲಿ ವಧು ಹಾಗೂ ವರರ ಅನುಪಾತ ಕಡಿಮೆಯಿದ್ದು, ಉತ್ತಮ ವರರನ್ನು ವಧುಗಳ ಪಾಲಕರು ಪರಿಗಣಿಸಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಯತೀಥ-'ರ್, ಸತಿತಾ ಗಲಗಲಿ, ವಿಜಯ ಜೋಶೀ, ಆನಂದ ಕುಲಕರ್ಣಿ, ಗೋವಿಂದ ಜೋಶಿ ಸೇರಿದಂತೆ ಅನೇಕರು ಹಾಜರಿದ್ದರು.

# ದಸರಾದಲ್ಲಿ ಚಿನ್ನದ ಅಂಬಾರಿ ಹೊರುವ ಅಭಿಮನ್ಯು ದಂತ ಮುರಿತ!

■ ಉದಯರಶ್ಮಿ ದಿನಪತ್ರಿಕೆ



ಎಚ್ ಡಿ ಕೋಟೆ: ಮೈಸೂರು ದಸರಾದಲ್ಲಿ ಚಿನ್ನದ ಅಂಬಾರಿ ಹೊರುವ ಮೂಲಕ ಜಗತ್ಪ್ರಸಿದ್ಧವಾಗಿರುವ ಅಭಿಮನ್ಯು ಆನೆಯ ಎಡಭಾಗದ ದಂತ ಮುರಿದಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮತ್ತಿಗೋಡು ಕ್ಯಾಂಪ್ ನಲ್ಲಿ ಮರದ ದಿಮ್ಮಿಗಳನ್ನು ಸ್ಥಳಾಂತ-ರಿಸುವಾಗ 59 ವರ್ಷದ ಅಭಿಮನ್ಯುವಿನ ಎಡಭಾಗದ ದಂತದ ಮುಂದಿನ ಭಾಗ ತುಂಡಾಗಿದೆ. ದುಬಾರೆ ಆನೆ ಕಾಳಗ ದುರಂತದ ಬಳಿಕ ಸಾಕಾನೆ ಶಿಬಿರಗಳಿಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿ-ತ್ತು. ಹೀಗಾಗಿ ಮತ್ತಿಗೋಡು ಕ್ಯಾಂಪ್ ನಲ್ಲಿ ಮರದ ದಿಮ್ಮಿಗಳನ್ನು ಸ್ಥಳಾಂತ-ರಿಸುವ ಕಾರ್ಯಚರಣೆ ನಡೆಸಲಾಗುತ್ತಿತ್ತು. ಮರದ ದಿಮ್ಮಿ ಮೇಲೆತ್ತುವ ಸಂದರ್ಭದಲ್ಲಿ ಅಭಿಮನ್ಯುವಿನ ಎಡಭಾಗದ ದಂತದ ಮುಂದಿನ ಭಾಗ ಸ್ವಲ್ಪ ತುಂಡಾಗಿದೆ.

ಘಟನೆ ನಡೆದ ಕೂಡಲೇ ಅಭಿಮನ್ಯು ಆರೋಗ್ಯ ಪರಿಶೀಲನೆ ನಡೆಸಿದ ಪಶುವೈದ್ಯರು, ಯಾವುದೇ ಆತಂಕವಿಲ್ಲ. ಗಾಯ ಗಂಭೀರವಲ್ಲ ಎಂದು ತಿಳಿಸಿದ್ದಾರೆ ಎನ್ನಲಾಗಿದೆ. 2020ರಿಂದಲೂ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ಹೊತ್ತಿದ್ದ ಅಭಿಮನ್ಯುವನ್ನು ಕಾಡಾನೆಗಳ ಕಾರ್ಯಾಚರಣೆಗಳಿಗೂ ಬಳಸಲಾಗುತ್ತಿತ್ತು. ಬಲಭಾಗಕ್ಕೆ ಬಾಗಿದಂತೆ ಕಾಣುತ್ತಿದ್ದ ದಂತದಿಂದಲೇ ಅಭಿಮನ್ಯು ದಾಳಿ ವೇಳೆ ಎದುರಾಳಿ ಆನೆಗಳನ್ನು ಹಿಮ್ಮೆಟ್ಟಿಸುತ್ತಿದ್ದ. ಅಲ್ಲದೆ ಕಾಡಾನೆಗಳಿಗೆ ಹೆಚ್ಚು ಹಾನಿ ಮಾಡುವ ಮೂಲಕ ಕಾರ್ಯಾಚರಣೆ ಸಫಲರಾಗುವಂತೆ ನೋಡಿಕೊಳ್ಳುತ್ತಿದ್ದ. ಇಲ್ಲಿಯವರೆಗೆ ಸುಮಾರು 150 ಕ್ಕೂ ಹೆಚ್ಚು ಕಾಡಾನೆಗಳನ್ನು ಸೆರೆಹಿಡಿದಿದ್ದಾನೆ. ಸುಮಾರು 50 ಕ್ಕೂ ಹೆಚ್ಚು ಹುಲಿಗಳನ್ನು ಸೆರೆಯಿಡಿಯುವುದರಲ್ಲಿ ಯಶ್ವಸಿಯಾಗಿದ್ದಾನೆ.

2020 ರಿಂದಲೂ ಅಂಬಾರಿ ಹೊರುವ ಜವಾಬ್ದಾರಿ ಯಶಸ್ವಿಯಾಗಿ ನಿಭಾಯಿಸುತ್ತಿರುವ ಅಭಿಮನ್ಯು, 2026ನೇ ಸಾಲಿನ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತರೆ ಸತತ 7ನೇ ಬಾರಿ ಅಂಬಾರಿ ಹೊತ್ತಂತೆ ಆಗಲಿದೆ. ಈ ಹಿಂದೆ ದ್ರೋಣ 18 ಬಾರಿ, ಬಲರಾಮ 13 ಬಾರಿ, ಅರ್ಜುನ ಸತತ 8 ಬಾರಿ ಅಂಬಾರಿ ಹೊತ್ತು ಸಾಧನೆ ಮಾಡಿದ್ದು, ಇದೀಗ ಹೆಚ್ಚು ಬಾರಿ ಅಂಬಾರಿ ಹೊತ್ತ ಆನೆಗಳ ಸಾಲಿನಲ್ಲಿ ಅಭಿಮನ್ಯು ಹೆಸರು ಸೇರ್ಪಡೆಯಾಗಲಿದೆ.

### ಅಭಿಮನ್ಯು ಇತಿಹಾಸ

**1970 ರಲ್ಲಿ ಕೊಡಗು ಜಿಲ್ಲೆಯ ಹೆಬ್ಬಳ್ಳ ಅರಣ್ಯ ಪ್ರದೇಶದಲ್ಲಿಅಭಿಮನ್ಯು ಆನೆ ಸೆರೆಹಿಡಿಯಲಾಗಿತ್ತು. ಈ ಹಿಂದೆ 2012 ರಿಂದ 2015 ರವರೆಗೆ ಅರಮನೆ ಗಾಡಿಯನ್ನು ಎಳೆಯುವ ಜವಾಬ್ದಾರಿ ನಿಭಾಯಿಸುತ್ತಿದ್ದ ಅಭಿಮನ್ಯು, ನಂತರ ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊರುತ್ತಿದ್ದ. ಕೂಂಬಿಂಗ್ ಸ್ಟಾರ್, ಕರ್ನಾಟಕದ ಎಕೆ-47 ಸೇರಿದಂತೆ ಹಲವು ಹೆಸರಿಂದ ಕರೆಯಲ್ಪಡುವ ಅಭಿಮನ್ಯು ಕರ್ನಾಟಕ ಮಾತ್ರವಲ್ಲದೇ, ದೇಶದಾದ್ಯಂತ ಅತ್ಯಂತ ಬಲಿಷ್ಠ ಆನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಸ್ತುತ ಅಭಿಮನ್ಯು ಆನೆಯನ್ನು ಮಾವುತ ಜೆ.ಎಸ್.ವಸಂತ್ ಮತ್ತು ಜೆ.ಕೆ.ರಾಜು ಪಾಲನೆ ಮಾಡುತ್ತಿದ್ದಾರೆ.**

# ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ನಿರ್ಲಕ್ಷ್ಯ ಬೇಡ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮತದಾರರ ಪಟ್ಟಿ ಪರಿಷ್ಕರಣೆಯ ಸಂದರ್ಭದಲ್ಲಿ ಗಣತಿ ನಮೂನೆ ಭರ್ತಿ ಮಾಡುವ ಸಂದರ್ಭ ಮಾಹಿತಿ ದಾಖಲಿಸುವಾಗ ಬಹು ಎಚ್ಚ-ರಿಕೆ ವಹಿಸಬೇಕು. ಪ್ರಸ್ತುತ ಮತದಾರರ ಕುಟುಂಬದ ಮಾಹಿತಿಯನ್ನು ತಪ್ಪಾಗಿ ನಮೂದಿಸದಾಗದಂತೆ ಎಚ್ಚರಿಕೆಯಿಂದ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಹಶೀಲ್ದಾರ್ ಅವ-ರಿಗೆ ಸೂಚಿಸಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್)-2026ರ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲೆಯ ಎಲ್ಲಾ ತಾಲೂಕು ತಹಶೀಲ್ದಾರರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಮಾಹಿತಿ ನಮೂದಿಸುವಾಗ ಯಾವುದೇ ಅನಗತ್ಯ ಸಮಸ್ಯೆಗಳು ಎದುರಾಗದಂತೆ ನೋಡಿಕೊಳ್ಳಬೇಕು. ಗಣತಿ ನಮೂನೆಯ ಎರಡನೇ ಕಾಲಂನ ಎರಡನೇ ಪಟ್ಟಿಯಲ್ಲಿ ಕೇವಲ 2002ರ ಮತದಾರರ ಪಟ್ಟಿಯಲ್ಲಿರುವ ಮಾಹಿತಿಯನ್ನೇ ದಾಖಲಿಸಬೇಕು. ಒಂದು ವೇಳೆ 2002ರ ಮಾಹಿತಿಯು ಲಭ್ಯವಿಲ್ಲದಿದ್ದರೆ ಆ ಕಾಲಂ ಅನ್ನು ಖಾಲಿ ಬಿಡಬೇಕು. ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟ ಸೂಚನೆ ನೀಡಿದರು.

ಗಣತಿ ನಮೂನೆಗಳ ಭರ್ತಿ, ರೂಲ್ ಬ್ಯಾಕ್ ಪ್ರಕ್ರಿಯೆ, ನೋಟಿಸ್ ಜಾರಿ ಹಾಗೂ ಹಿಯರಿಂಗ್‌ಗೆ ಸಂಬಂಧಿಸಿದಂತೆ ಅಗತ್ಯ ಸೂಚನೆಗಳನ್ನು ನೀಡಿದ ಅವರು, ಪ್ರತಿ ದಿನ ತಹಶೀಲ್ದಾರರು, ಚುನಾವಣಾ ಅಧಿಕಾ-ರಿಗಳು ಹಾಗೂ ಬಿಎಲ್‌ಒಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು. ರೂಲ್ ಬ್ಯಾಕ್ ಪ್ರಕ್ರಿಯೆ ಆರಂಭವಾಗುವ ಮೊದಲೇ ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿಕೊಂಡರೆ ಅಂತಿಮ ಹಂತದಲ್ಲಿ ತೊಂದರೆ ಉಂಟಾಗುವುದಿಲ್ಲ ಎಂದರು.

ಗಣತಿ ನಮೂನೆಗಳ ಪರಿಶೀಲನೆಯ ಸಂದರ್ಭದಲ್ಲಿ ಡ್ಯಾಶ್‌ಬೋರ್ಡ್‌ನಲ್ಲಿ "ರೂಲ್ ಬ್ಯಾಕ್" ಅಥವಾ ಆಕ್ಷೇಪಣೆಗೆ ಒಳಪಡುವ ನಮೂನೆಗಳನ್ನು ಗುರುತಿಸಿ, ಸಂಬಂಧಿಸಿದ ಬಿಎಲ್‌ಒಗಳಿಗೆ ತಕ್ಷಣ ಮಾಹಿತಿ ನೀಡಿ ಅಗತ್ಯ ತಿದ್ದುಪಡಿ ಮಾಡಿಸಬೇಕು. ರೂಲ್ ಬ್ಯಾಕ್ ಪ್ರಕ್ರಿಯೆಯೊಂದಿಗೆ ನೋಟಿಸ್ ಗಳು ಜಾರಿಯಾಗಲಿರುವುದರಿಂದ ಅವುಗಳನ್ನು ನಿಯಮಾನುಸಾರ ಕಡ್ಡಾಯವಾಗಿ ಅನುಸರಿಸಬೇಕು ಎಂದರು.

ನೋಟಿಸ್ ಜಾರಿ ಹಾಗೂ ಹಿಯರಿಂಗ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪೂರ್ವಸಿದ್ಧತೆಗಳನ್ನು ಈಗಿನಿಂದಲೇ ಕೈಗೊಳ್ಳಬೇಕು. ಹಿಯರಿಂಗ್ ನಡೆಯುವ ಸ್ಥಳ, ಸಮಯ, ಕುಳಿತುಕೊಳ್ಳುವ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. ಒಂದು ಗುಂಪಿಗೆ ನೀಡುವ ಸಮಯ, ಆಗಮನ-ನಿರ್ಗಮನ ವ್ಯವಸ್ಥೆ ಸೇರಿದಂತೆ ಎಲ್ಲ ಅಂಶಗಳಿಗೂ ಸಮರ್ಪಕ ಯೋಜನೆ ರೂಪಿಸಬೇಕು. ಗಣತಿ ನಮೂನೆಗಳನ್ನು ಭರ್ತಿ ಮಾಡುವ ವೇಳೆ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡಿ ತಾಳ್ಮೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಗಣತಿ ನಮೂನೆ ವಿತರಿಸುವ ಸಿಬ್ಬಂದಿ ಹಾಗೂ ಬಿಎಲ್‌ಒಗಳು ಗಣತಿ ಕಾರ್ಯ ಪೂರ್ಣಗೊಳ್ಳುವವರೆಗೆ ಯಾವುದೇ ಸರ್ಕಾರಿ ರಜೆ ಇರುವುದಿಲ್ಲ. ಹೀಗಾಗಿ ಎಲ್ಲರೂ ಸಂಪೂರ್ಣ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಹಿಯರಿಂಗ್ ಪ್ರಕ್ರಿಯೆಗೆ ಎಷ್ಟು ಜನರ ಗುಂಪು ಮಾಡಬೇಕು, ಯಾವ ಸಮಯದಲ್ಲಿ ನಡೆಸಬೇಕು ಹಾಗೂ ಸ್ಥಳ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಬೇಕು. ಅಗತ್ಯವಿದ್ದಲ್ಲಿ ಹೆಚ್ಚುವರಿ ಸಹಾಯಕ ಚುನಾವಣಾ ಅಧಿಕಾರಿಗಳನ್ನು (ಎಇಆರ್ ಒ) ನೇಮಕ ಮಾಡಲು ಚುನಾವಣಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ ಎಂದರು.

ಈ ಎಲ್ಲ ಸೂಚನೆಗಳನ್ನು ತಾಲೂಕಿನ ಎಲ್ಲಾ ಬಿಎಲ್‌ಒಗಳಿಗೆ ತಲುಪಿಸಿ, ಗಣತಿ ನಮೂನೆಗಳನ್ನು ನಿಯಮಾನುಸಾರ ಹಾಗೂ ದೋಷರಹಿತವಾಗಿ ಭರ್ತಿ ಮಾಡುವಂತೆ ನಿರ್ದೇಶನ ನೀಡಬೇಕು ಎಂದು ಜಿಲ್ಲಾಧಿಕಾ-ರಿಗಳು ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು.

# ಪ್ರೇಮ ಪಯಣಕೆ ಭಾವ ತೀರದ ಓಲೆ

■ ಉದಯರಶ್ಮಿ ದಿನಪತ್ರಿಕೆ

■ ನನ್ನೊಲವಿನ ಸೂರಿ

‘ನವಿಲಿನ ಗರಿಯಂತೆ ಕಪ್ಪಗಿರುವ ದಟ್ಟವಾದ ಕೂದಲನ್ನು ಹೆಣೆದು, ಹೆಣೆದಿರುವ ಉದ್ದ ಜಡೆಗೆ ಮೈಸೂರು ಮಲ್ಲೆ ಮುಡಿವ ನೀನು ಸ್ಟೈಲ್ ಮಾಡುವ ಹುಡುಗಿಯರ ಗುಂಪಿಗೆ ಸೇರುವುದಿಲ್ಲ ಎಂದೆನಿಸಿತು. ಬಳ್ಳಿಯಂತಿರುವ ಮೈಮಾಟ, ಕಮಲದ ದಳಗಳಂತಿರುವ ಕಂಗಳು, ಹಂಸದ ನಡಿಗೆ, ನಕ್ಷತ್ರದಂತೆ ಹೊಳೆವ ಮಂದಹಾಸ, ನಿನ್ನ ಮಧುರ ಕಂಠದಲ್ಲಿ ನನ್ನ ಹೆಸರ ಕೇಳಿ ಮನದಲ್ಲಿ ಹುಡುಗಿಯ ಧ್ವನಿ ಎಷ್ಟು ಚೆನ್ನಾಗಿದೆ ಎಂದು ಹೇಳಿಕೊಂಡೆ. ಹೊಳೆವ ನಿನ್ನ ಕಂಗಳ ಕಾಂತಿಗೆ ಸೋತು ಬೆರಗಾಗಿರುವೆ. ಗುಲಾಬಿಯಂತೆ ಕೋಮಲವಾಗಿರುವೆ. ನಿನ್ನ ಕಂಗಳ ಕಪ್ಪು ಪರದೆಯೊಳಗೆ ಸಿಲುಕಿರುವೆ. ಹೃದಯದಲ್ಲಿ ಪ್ರೀತಿ ಕಲರವ ಹಾಡಿದೆ ಒಲವೆ. ನೀನೇ ನನ್ನ ಕಾಪಾಡಬೇಕು ಚೆಲುವೆ. ಇಷ್ಟು ಕಾಲ ಅದೆಲ್ಲಿ ಅಡಗಿದ್ದೆ? ಅಮೃತ ಗಳಿಗೆಯಲ್ಲಿ ಕಣ್ಣಿಗೆ ಬಿದ್ದೆ. ಮಂಡೆಯೂರಿ ಕೂತು ನಿವೇದನೆ ಮಾಡಿಕೊಳ್ಳುವೆ ನನ್ನೊಲವ ಒಪ್ಪಿಕೊ ನನ್ನೊಲವೆ.’


ಎಂದು ಮುದ್ದಾದ ಕೈ ಬರಹದಲ್ಲಿ ನಿನ್ನ ಉತ್ಕಟ ಪ್ರೀತಿ ಹರಿಬಿಟ್ಟು ಬರೆದಿದ್ದ ಒಲವಿನೋಲೆ ಓದಿ ಒಪ್ಪಿಕೊಳ್ಳದೇ ಇರದಾದೆ. ‘ಹರಿಯುವ ಒಲವಿನ ನದಿಗೆ ತಡೆಗೋಡೆ ಕಟ್ಟುವುದು ಒಳಿತಲ್ಲವವಲ್ಲವೇ? ಹಾಗೆಂದೆ ಒಪ್ಪಿಕೊಂಡೆ ನಿನ್ನೊಲವಿಗೆ ನನ್ನೊಲವೆ. ಸ್ವಾರ್ಥದ ಮಹಲಿನಲ್ಲಿ ಪ್ರೇಮದೊಲವನ್ನು ಒಟ್ಟುವವನು ನೀನಲ್ಲವೆಂದು ನಂಬಿರುವೆ.’ ಎಂದು ನಾನುತ್ತರಿಸಿದೆ. ಅಂದಿನಿಂದ ಶುರುವಾಯಿತು ಕಾಲೇಜಿನ ಕಾರಿಡಾರಿನಲ್ಲಿ ಕದ್ದುಮುಚ್ಚಿ ಒಲವಿನೋಲೆಗಳ ವಿನಿಮಯ. ಸಿರಿ ನನ್ನ ಹೆಸರಿನಲ್ಲಿ ಮಾತ್ರ ಇದೆ. ಮನೆಯಲ್ಲಿ ಬಡತನ ಕಾಲು ಮುರಿದುಕೊಂಡು ಬಿದ್ದಿದೆ ಎಂದೆ ಚಿಂತಿಸದಿರು ಅದೆಲ್ಲ ಶಾಶ್ವತವಲ್ಲ ಎಂದು ಧೈರ್ಯ ತುಂಬಿದೆ.

ದೊಡ್ಡಸ್ತನ ತೋರಿಸಲು ಸಾಲ ಮಾಡಿ ಕಾರಿನಲ್ಲೇ ಓಡಾಡುತ್ತಾರೆ. ಅಂಥದ್ದರಲ್ಲಿ ಕನಸಿನಲ್ಲಿ ಕಂಡರಿಯದ ಶ್ರೀಮಂತಿಕೆಯ ವೈಭವ ಇದ್ದರೂ ಸೈಕಲ್ ತುಳಿಯುತ ಕಾಲೇಜಿಗೆ ಬರುವ ನಿನ್ನ ಸರಳ ಜೀವನ ಕಂಡು ಬೆಚ್ಚಿ ಬಿದ್ದೆ. ಮಹಡಿಯ ವಿಶಾಲವಾಗಿದ್ದ ಕೋಣೆಗಳ್ಳುಳ್ಳ ಬಂಗಲೆ ಸುತ್ತಮುತ್ತಲಿನ ನೋಟ ರಾಜಮಹಲನ್ನು ನೆನಪಿಸುವಂತಿತ್ತು. ಹುಡುಗಿಯರ ಕಂಡರೆ ಕೈ ಕುಲುಕಿ ಮಾತನಾಡಿಸಲು ಮುಂದಾಗುವ ಹುಡುಗರೇ ಹೆಚ್ಚು. ಆದರೆ ಹುಡುಗಿಯರೆಂದರೆ ಮಾರು ದೂರ ನಿಲ್ಲುವ ಗುಣ ಕಂಡ ಆ ಕ್ಷಣವೇ ನಿನ್ನ ಮೇಲೆ ಮಮತೆ ಮೂಡಿತು. ಕೋಟಿ ಕೋಟಿ ಆಸ್ತಿ ಎಸ್ಟೇಟ್, ಫ್ಯಾಕ್ಟರಿ ಮತ್ತು ಬಂಗಲೆ ಮೇಲೆ ನಿನ್ನ ಹೆಸರಿದ್ದರೂ ನೀನು ಮಾತ್ರ ಸೀದಾ ಸಾದಾ ಹುಡುಗ. ಆದರೆ ನಡೆಯಲ್ಲಿ ಚುರುಕುತನ ಎದ್ದು ಕಾಣುತ್ತದೆ.

ಪ್ರಶಾಂತತೆ ಎದ್ದು ಕಾಣುವ ಮುಖ, ಕಣ್ಣಲ್ಲಿ ಮಿನುಗುವ ಮೃದುತ್ವ ಎಂಥ ಕಲ್ಲು ಹೃದಯದವರನ್ನೂ ಕರಗಿಸುತ್ತದೆ. ಸಿರಿವಂತಿಕೆಗೂ ನೆಮ್ಮದಿಗೂ ಎಣ್ಣೆ ಸೀಗೆಕಾಯಿ ಸಂಬಂಧ ಆದರೆ ನೀನು ಮಾತ್ರ ಇಷ್ಟು ನೆಮ್ಮದಿಯಾಗಿ ಇದ್ದೀಯಲ್ಲ ಎಂದು ಹೆಮ್ಮೆಯಿಂದ ಹೇಳಿಕೊಂಡಿತ್ತು ಮನಸ್ಸು. ದುಡ್ಡು ಆಸ್ತಿ ನೋಡಿ ಹೆಣ್ಣು ಕೊಡುವವರು ಮನೆ ಮುಂದೆ ಸಾಲು ಹಚ್ಚಿರುತ್ತಾರೆ. ಸಿರಿವಂತ ಮನೆತನದಿಂದಲೇ ಹೆಣ್ಣು ತಂದು ಮದುವೆ ಮಾಡುತ್ತೇವೆಂದು ಹಟ ಮಾಡುವ ಶ್ರೀಮಂತ ತಂದೆ ತಾಯಿಯರು ತುಂಬಿ ತುಳುಕುತ್ತಿದ್ದಾರೆ. ಅಂತಹದ್ದರಲ್ಲಿ ನಿನ್ನ ಹೆತ್ತವರು ಆದರ್ಶವೆನಿಸುತ್ತಾರೆ.









ಒತ್ತಾಯ ಮಾಡಿ ನನ್ನನ್ನು ನಿಮ್ಮ ಮನೆಗೆ ಕರೆದೊಯ್ದಾಗ ಯಾರ ಮುಖದಲ್ಲೂ ಶ್ರೀಮಂತಿಕೆಯ ದರ್ಪ ಎದ್ದು ಕಾಣಲಿಲ್ಲ. ‘ಶ್ರೀಮಂತರ ಮನೆ ನೋಟ ಚೆಂದ ಊಟ ಅಷ್ಟರಲ್ಲೆ.’ ಎಂಬ ಮಾತುಗಳನ್ನು ಕೇಳಿದ್ದ ನನಗೆ, ಬೇಡ ಬೇಡವೆಂದರೂ ವಿಧವಿಧವಾದ ತಿಂಡಿ ತಿನಿಸು ಹಣ್ಣುಹಂಪಲ ಬಲವಂತ ಮಾಡಿ ತಿನ್ನಿಸಿದರು. ನಡುನಡುವೆ ನನ್ನ ಓದಿನ ಬಗ್ಗೆ ವಿಚಾರಿಸಿದರು. ಇನ್ಮೇಲೆ ಓದಿಗೆ ಏನೇ ಅನುಕೂಲ ಬೇಕಿದ್ದರೂ ಮುಜುಗರ ಮಾಡಿಕೊಳ್ಳದೇ ನನ್ನ ಕೇಳಬಹುದು ಎಂದಿದ್ದರು ನಿಮ್ಮ ತಂದೆ. ಓದುವುದರ ಜೊತೆಗೆ ಊಟ ತಿಂಡಿಗಳ ವಿಷಯದಲ್ಲೂ ಗಮನ ಹರಿಸಬೇಕೆಂದು ಹೇಳುವುದನ್ನು ಮರೆಯಲಿಲ್ಲ ನಿನ್ನ ತಾಯಿ.

ಸಹಬಾಳ್ವೆ ಮತ್ತು ಹಂಚಿ ಉಣ್ಣುವ ಸಾಕಾರ ಮೂರ್ತಿ ಎಂದೆನಿಸಿದರು ನಿನ್ನ ಹೆತ್ತವರು. ಪಡೆದದ್ದನ್ನು ಪರರಿಗೂ ಹಂಚಬೇಕೆನ್ನುವ ಔದಾರ್ಯ ಗುಣ ಅವರದು. ಸ್ವಾರ್ಥದ ಸುಳಿಗೆ ಸಿಲುಕಿರುವ ಇಂದಿನ ಸಿರಿವಂತರಿಗೆ ನಿಜಕ್ಕೂ ಮಾದರಿ. ನಿಮ್ಮಮ್ಮ ಅಂದರೆ ನನ್ನತ್ತೆ ಅಡಿಯಿಂದ ಮುಡಿಯವರೆಗೂ ದಿಟ್ಟಿಸಿ ನೋಡಿದರು. ‘ಶ್ರೀಗೌರಿಯಂತೆ ಮುದ್ದಾಗಿರುವೆ.’ ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು. ಆಗ ಕಣ್ಣು ಕ್ಷಣ ತುಂಬಿತ್ತು. ನಾನು ಅಂದುಕೊಂಡಿರುವಂತೆ ಇವರಲ್ಲ ಎನ್ನುವ ಅನಿಸಿಕೆ ಮೂಡಿ ಒಂದು ರೀತಿಯ ತೃಪ್ತಿ ಮೂಡಿತ್ತು. ಸಂಕಟದಲ್ಲಿ ಜೊತೆಗೂಡುವ ಒಳ್ಳೆಯ ಮನಸ್ಸು ‘ನಾನು ಮತ್ತು ನನ್ನ ಕುಟುಂಬ’ ಎಂಬ ಸಂಕುಚಿತ ಮನೋಭಾವದಿದಿಂದ ಹೊರಬಂದು ನಮ್ಮವರು ಎಂಬ ವಿಶಾಲಮನೋಭಾವ ನಿನ್ನಲ್ಲಿ ಬೆಳೆಯಲು ನಿನ್ನ ಹೆತ್ತವರೆ ಕಾರಣ ಎಂದೆನಿಸಿತು. ಮಾನವೀಯತೆ ಮುಂದೆ ಯಾವ ಸಿರಿವಂತಿಕೆಯೂ ದೊಡ್ಡದಲ್ಲ ಎಂಬ ಭಾವ ಮೂಡಿತ್ತು.

ಪಾರ್ಕಿನಲ್ಲಿ ಭೇಟಿಯಾಗಬೇಕೆಂದು ನಿರ್ಧರಿಸಿದ ಸಮಯವದು. ಮುಸ್ಸಂಜೆಯ ಸಮಯ ಎತ್ತರದ ಗಿಡಮರಗಳು, ಹತ್ತಿರಕ್ಕೆ ಇದ್ದಂತಹ ಹೂಗಿಡಗಳು, ಸುತ್ತಲೂ ತೀಡುತ್ತಿದ್ದ ತಂಗಾಳಿ, ಮನಮೋಹಕ ದೃಶ್ಯ ಒಂದು ಕ್ಷಣ ಮೈ ಮರೆಸಿತ್ತು. ತುಂಬಾ ಹತ್ತಿರದಿಂದ ಈ ಸೌಂದರ್ಯವ ಆಸ್ವಾದಿಸಬೇಕು ಎಂದು ಮನಸ್ಸು ಹೇಳುತ್ತಿತ್ತು. ಯಾರೋ ಬಂದರೂ ಹೆಜ್ಜೆಯ ಸದ್ದಿಗೆ ನಿನ್ನ ನೋಡುವ ಕುತೂಹಲದಿಂದ ತಿರುಗಿ ನೋಡುತ್ತಿದ್ದೆ. ಕೊನೆಗೂ ನಿನ್ನ ಪಾದಗಳ ಸದ್ದು ಕೇಳಿಸಿತು. ಮೊದಲ ಮಳೆಯ ಮೊದಲ ತುಂತುರು ಹನಿಗಳು ಬಯಲಲ್ಲಿ ಬೀಳುತ್ತಿತ್ತು. ನಿನ್ನ ಪ್ರೀತಿಯ ಹೊದಿಕೆ ಬಾನಂಚಿನವರೆಗೂ ರಮ್ಯ ಮನೋಹರವಾಗಿತ್ತು.

ಪೂರ್ಣ ಕತ್ತಲು ಆವರಿಸುವ ಮುನ್ನ ತೇಲಿಸಿ ಬಿಡು ಸವಿಜೇನಿನ ಮುತ್ತಿನ ಹೊನಲಲಿ ಎನ್ನುತ್ತಿತ್ತು ತುಂಟ ಮನಸ್ಸು. ಪಕ್ಕದಲ್ಲೇ ಕೂತಿದ್ದ ನಿನ್ನುಸಿರಿನ ಬಿಸಿ ಮೈಗೆ ತಾಗುತ್ತಿತ್ತು. ಹೆಗಲಿಗೆ ಹೆಗಲು ತಾಕಿತ್ತು. ಎರಡು ದೇಹಗಳಿಗೂ ಬೆಚ್ಚನೆಯ ಅಪ್ಪುಗೆ ಬೇಕಿತ್ತು. ಕೈಗಳು ಹಿಡಿಯುವುದಕ್ಕೆ ಅಧರಗಳು ಅಂಟಿಕೊಳ್ಳುವುದಕ್ಕೆ ಕಾಯುತ್ತಿದ್ದವು. ನಾಚಿಕೆ ಮೂಡಿಸುವ ಸಾವಿರ ಸಾವಿರ ಬಯಕೆಗಳು ಎತ್ತರೆತ್ತರಕ್ಕೆ ನಿಲ್ಲತೊಡಗಿದ್ದವು.ಇಬ್ಬರ ನಡುವಿನ ಅಂತರ ಕರಗಿ ಹೋಗಿತ್ತು. ಕೆಂದುಟಿಯ ಹೋಳಿಗೆಯ ಊಟಕ್ಕೆ ಮನಸ್ಸು ತಯಾರಾಗಿತ್ತು. ಹೀಗೆ ಮನದಲ್ಲಿ ಪ್ರಣಯದ ಮೆರವಣಿಗೆ. ಸಾಗಿತ್ತು. ಅಷ್ಟರಲ್ಲಿ ಬಾಚಿ ತಬ್ಬಿ ನೀನಿತ್ತೆ ಹಣೆಗೆ ಹೂಮುತ್ತು.

ಮೆಲ್ಲಗೆ ತೆಕ್ಕೆಯಿಂದ ಹೊರಬಂದು ನೀನಾಡಿದ ಮಾತು ನನ್ನ ಕಣ್ಣು ತೆರೆಸಿತ್ತು. ‘ಮುರಿದು ಬಿದ್ದ ಸೇತುವೆ, ತಳ ಒಡೆದ ನಾವೆ ನಾವಾಗಬಾರದು. ಹರೆಯದ ಅಲೆಗಳ ರಭಸಕ್ಕೆ ಕೊಚ್ಚಿಹೋದ ಜೀವದೋಣಿಗಳು ಅದೆಷ್ಟೋ ಲೆಕ್ಕವಿಲ್ಲದಷ್ಟು. ಹಾರಿ ಹೋದ ಯುವಜೋಡಿ ಹಕ್ಕಿಗಳ ರೆಕ್ಕೆಗಳ ಸದ್ದನ್ನು ಗೂಡಿನಲ್ಲಿರುವ ತಾಯಿ ತಂದೆ ಹಕ್ಕಿಗಳು ನೆನೆಯದಂತೆ ಮಾಡಬೇಕು. ಮೌನದಲ್ಲಿ ನೆನೆದು ಕಣ್ಣೀರು ಹಾಕದಂತೆ ನೋಡಿಕೊಳ್ಳಬೇಕು.’ ನಿನ್ನ ಮಾತುಗಳಲ್ಲಿ ತೂಕವಿದೆ. ಹೆಣ್ಣಾದ ನಾನೇ ಈ ರೀತಿಯ ಪ್ರೀತಿಗೆ ಬಿದ್ದು ಬದುಕು ಹಾಳುಮಾಡಿಕೊಳ್ಳುವುದನ್ನು ತಡೆದೆ. ನಿಮ್ಮಮ್ಮ ನನ್ನನ್ನು ಸೊಸೆಯಾಗಿ ಮನೆ ತುಂಬಿಸಿಕೊಳ್ಳಲು ಒಪ್ಪಿದ್ದಾರೆಂಬ ಸಂತಸದ ಸುದ್ದಿಯನ್ನು ತಿಳಿಸಿದೆ.

ಅಂದು ರಾತ್ರಿ ಪ್ರೀತಿಯ ರಂಗಿನ ತರಂಗಗಳಿಗೆ ಮನವು ಹುಚ್ಚೆದ್ದು ಕುಣಿಯಿತು. ನಿದಿರೆ ಬಾರದೆ ನಿನ್ನೊಂದಿಗೆ ಕಳೆದ ಸವಿನೆನಪುಗಳ ಹೆಕ್ಕುತ್ತ ಮಂಚದ ಮೇಲೆ ಮೈ ಚೆಲ್ಲಿದ್ದೆ. ‘ಅರ್ಧ ತೆರೆದ ಬಾಗಿಲ ಮೇಲೆ ನಿನ್ನ ಕೈ ತಟ್ಟಬಹುದೆಂದುಕೊಂಡು ಕಿವಿಗೊಟ್ಟು ಕೂತೆ. ಆಗು ಬಾ ಕೊರೆಯುವ ಚಳಿಗೆ ಹೊದಿಕೆ ಎಂದೆಲ್ಲ ಕವಿತೆಯನ್ನೂ ಬರೆದೆ.’ ಈಗ ಅದೆಲ್ಲ ಸವಿನೆನಪಿನ ಕಥೆ. ನಡೆಯಬೇಕಿದೆ ಇಂದಿನ ಇರುಳಿಂದ ಇಬ್ಬರದೂ ಜೋಡಿ (ಚಕೋರ ಚಕ್ರವಾಕ) ಪಕ್ಷಿಗಳಂತೆ ನಿತ್ಯ ಪ್ರೇಮಿಗಳಾಗಬೇಕಿದೆ. ಪ್ರೀತಿ ಪ್ರೇಮ ಪ್ರಣಯದ ಕಥೆ ಜೊತೆ ವಸಂತಕಾಲ ಮುಂದುವರೆಸಬೇಕಿದೆ.

***ಇಂತಿ ನಿನ್ನೊಲವಿನ ಸಿರಿ***

ಲೇಖನ
■ ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



# ವಿದ್ಯುತ್ ವಿತರಣೆಯ ಖಾಸಗೀಕರಣ ರದ್ದು :ರಂಜುಣಗಿ ಸ್ವಾಗತ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ರಾಜ್ಯದಲ್ಲಿ ವಿದ್ಯುತ್ ವಿತರಣೆಯ ಖಾಸಗೀಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಅರ್ಜಿಯನ್ನು ಟಾಟಾ ಕಂಪನಿಯು ಹಿಂದಕ್ಕೆ ಪಡೆದಿರುವುದು ಸಾರ್ವಜನಿಕ ವಲಯ, ಸಿಬ್ಬಂದಿ, ಕಾರ್ಮಿಕ ಸಂಘಟನೆಗಳು ಹಾಗೂ ವಿವಿಧ ರೈತ–ಜನಪರ ಸಂಘಟನೆಗಳ ನಿರಂತರ ಹೋರಾಟಕ್ಕೆ ಸಂದ ಮಹತ್ವದ ಗೆಲುವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ತಾಲೂಕಾಧ್ಯಕ್ಷ ಬಸವರಾಜ ರಂಜುಣಗಿ ಎಂದಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ವಿದ್ಯುತ್ ಖಾಸಗೀಕರಣದ ವಿರುದ್ಧ ಕಳೆದ ಕೆಲವು ತಿಂಗಳುಗಳಿಂದ ರಾಜ್ಯದಾದ್ಯಂತ ಪ್ರತಿಭಟನೆಗಳು, ಮನವಿ ಸಲ್ಲಿಕೆ, ಜಾಗೃತಿ ಅಭಿಯಾನಗಳು ಹಾಗೂ ವಿವಿಧ ರೀತಿಯ ಹೋರಾಟಗಳು ನಡೆಯುತ್ತಿದ್ದವು.

ಸಾರ್ವಜನಿಕ ಸೇವೆಯಾದ ವಿದ್ಯುತ್ ವಿತರಣೆಯನ್ನು ಖಾಸಗೀಕರಣ ಮಾಡುವುದರಿಂದ ಜನಸಾಮಾನ್ಯರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳಬಹುದು ಎಂಬ ಆತಂಕವನ್ನು ಹಲವು ಸಂಘಟನೆಗಳು ವ್ಯಕ್ತಪಡಿಸಿದ್ದವು.

ಈ ಹಿನ್ನೆಲೆಯಲ್ಲಿ ಟಾಟಾ ಕಂಪನಿಯು ತನ್ನ ಅರ್ಜಿಯನ್ನು ಹಿಂದಕ್ಕೆ ಪಡೆದಿರುವ ಬೆಳವಣಿಗೆಗೆ ವಿವಿಧ ಕಾರ್ಮಿಕ ಸಂಘಟನೆಗಳು ಹಾಗೂ ಜನಪರ ಸಂಘಟನೆಗಳು ಸ್ವಾಗತ ವ್ಯಕ್ತಪಡಿಸಿದ್ದು, ಇದು ಜನರ ಏಕತೆ ಮತ್ತು ಹೋರಾಟದ ಶಕ್ತಿಗೆ ದೊರೆತ ಯಶಸ್ಸು. ಮುಂಬರುವ ದಿನಮಾನಗಳಲ್ಲಿ ವಿದ್ಯುತ್ ಕ್ಷೇತ್ರದಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆ ತರುವ ಯಾವುದೇ ಕ್ರಮಗಳನ್ನು ಸರಕಾರಗಳು ಕೈಗೊಂಡರೆ ವಿರೋಧಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

# ಎನ್ಯೂಮರೇಶನ್ ನಮೂನೆ ವಿತರಣೆ

ಗದಗ: ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಎನ್ಯೂಮರೇಶನ್ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಗದಗ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಮಂಗಳವಾರ ವಿವಿಧ ಕ್ಷೇತ್ರಗಳ ಗಣ್ಯರಿಗೆ ಎಸ್ಐಆರ್ ಎನ್ಯೂಮರೇಶನ್ ನಮೂನೆಗಳನ್ನು ವಿತರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಶಿವಾನಂದ ಮಠದ ಪೂಜ್ಯ ಶಿವಾನಂದ ಶ್ರೀಗಳು, ಅಂತಾರಾಷ್ಟ್ರೀಯ ಕುಸ್ತಿಪಟು ಕು. ಪ್ರೇಮಾ ಹುಚ್ಚಣ್ಣನವರ ಹಾಗೂ ಪ್ರಮುಕರಾದ ಅಬುಬಕರ ಕಟ್ಟೀಮನಿ ಅವರಿಗೆ ಎಸ್ಐಆರ್ ಎನ್ಯೂಮರೇಶನ್ ನಮೂನೆಗಳನ್ನು ಜಿಲ್ಲಾಧಿಕಾರಿಗಳು ವಿತರಿಸಿದರು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಯಶಸ್ವಿಯಾಗಲು ಸಾರ್ವಜನಿಕರ ಸಹಕಾರ ಅತ್ಯಂತ ಅಗತ್ಯವಾಗಿದೆ. ಪ್ರತಿಯೊಬ್ಬ ಅರ್ಹ ಮತದಾರರು ಎಸ್ಐಆರ್ ಎನ್ಯೂಮರೇಶನ್ ನಮೂನೆಯನ್ನು ಸರಿಯಾಗಿ ಭರ್ತಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ನಿಗದಿತ ಅವಧಿಯೊಳಗೆ ಸಲ್ಲಿಸುವ ಮೂಲಕ ಚುನಾವಣಾ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕ ಹಾಗೂ ಸಮರ್ಪಕವಾಗಿಸಲು ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರು ಈ ಅಭಿಯಾನದಲ್ಲಿ ಭಾಗವಹಿಸುವುದರಿಂದ ಸಾರ್ವಜನಿಕರಲ್ಲಿ ಜಾಗೃತಿ ಹೆಚ್ಚಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು ಎಸ್ಐಆರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವಿಶ್ವಾಸವಿದೆ ಎಂದು ಅವರು ತಿಳಿಸಿದರು.


ಜೂನ್ 30 ರಿಂದ ಜುಲೈ 29 ರವರೆಗೆ ಬಿ.ಎಲ್.ಒ.ಗಳು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಹಾಗೂ ಪರಿಶೀಲನೆ ನಡೆಸಲಿದ್ದಾರೆ. ತದನಂತರ ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು.

ಆಯೋಗದ ಮಾರ್ಗಸೂಚಿಯಂತೆ 2002ರ ಮತದಾರರ ಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು, ಪ್ರಸ್ತುತ ಇರುವ 2025ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಹಾಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಸಲಾಗಿದೆ ಎಂದರು.

# ಸೋಲೇ ಗೆಲುವಿನ ಸೋಪಾನ ಮರೆಯದಿರಿ

■ ಉದಯರಶ್ಮಿ ದಿನಪತ್ರಿಕೆ

## ಮನದಂಗಳ






ಜೀವನದಲ್ಲಿ ತಾನು ಕೈಗೆತ್ತಿಕೊಂಡ ಯಾವುದೇ ವ್ಯವಹಾರ ವಹಿವಾಟುಗಳಲ್ಲಿ ಯಶಸ್ಸನ್ನು ಕಾಣದ ವ್ಯಕ್ತಿಯೊಬ್ಬ ಬದುಕಿನ ಆಸೆಯನ್ನು ಕಳೆದುಕೊಂಡು ಒಂಟಿಯಾಗಿ ಮನೆಬಿಟ್ಟು ಹೊರಟುಹೋದ. ನಡೆಯುತ್ತಾ ಹೋದವನು ದೊಡ್ಡದಾದ ಕಲ್ಲಿನ ಗುಹೆಯೊಳಗೆ ಕುಳಿತು ತನ್ನ ಕಷ್ಟಗಳು ಮತ್ತು ಜೀವನದಲ್ಲಿ ಉಂಟಾದ ಸೋಲುಗಳ ಕುರಿತು ಚಿಂತಿಸತೊಡಗಿದ. ಯಾವ ರೀತಿಯಲ್ಲಿ ಯೋಚಿಸಿದರೂ ಕಮರಿ ಹೋಗಿದ್ದ ತನ್ನ ಆತ್ಮಸ್ಥೈರ್ಯ ಚಿಗುರುತ್ತಿರಲಿಲ್ಲ, ಹೊಸ ಉತ್ಸಾಹವೂ ಮೂಡುತ್ತಿರಲಿಲ್ಲ, ಹೊಸ ದಾರಿಯೂ ಕಾಣಿಸುತ್ತಿರಲಿಲ್ಲ. ಬದುಕೆಲ್ಲಾ ಈ ಹತಾಶೆ, ನೋವು, ನಿರಾಶೆ ಮತ್ತು ಸೋಲಿನಲ್ಲೇ ಕಳೆಯಬೇಕೋ ಏನೋ ಎಂದು ಅಧೀರನಾಗಿ ಚಿಂತಿಸುತ್ತಿದ್ದ. ಸೋಲಿನಿಂದ ಕಂಗೆಟ್ಟ ಆತನಿಗೆ ಬೇರೆ ದಾರಿಯೂ ಕಾಣದೇ ಗುಹೆಯ ಮೂಲೆಯಲ್ಲಿ ಕುಳಿತು ಹೊರಗಡೆ ಆಕಾಶದೆಡೆಗೆ ಶೂನ್ಯ ದೃಷ್ಟಿಯಿಟ್ಟು ಕುಳಿತಿದ್ದ.

ಅಲ್ಲಿನ ಸಣ್ಣ ಧ್ವನಿಯೂ ಕೇಳಿಸುವಷ್ಟು ಮೌನವಿದ್ದು, ಸಣ್ಣ ಮಿಸುಕಾಟವೂ ಆತನಿಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಆಗ ಗುಹೆಯ ಮೂಲೆಯಲ್ಲಿ ಬೃಹತ್ ಗಾತ್ರದ ಜೇಡವೊಂದು ಬಲೆಯನ್ನು ನೇಯಲು ಬಂಡೆಯನ್ನು ನಿಧಾನವಾಗಿ ಏರುತ್ತಿತ್ತು. ತಕ್ಷಣ ಆಯತಪ್ಪಿ ಜಾರಿ ಕೆಳಗೆ ಬಿತ್ತು. ಈತ ಕುತೂಹಲದಿಂದ ಈಗ ಜೇಡ ಏನು ಮಾಡುವುದೆಂದು ಸೂಕ್ಷ್ಮವಾಗಿ ಗಮನಿಸತೊಡಗಿದ. ಆದರೆ ಆ ಜೇಡ ತಾನು ಕೆಳಗೆ ಬಿದ್ದೇ ಇಲ್ಲವೇನೋ ಎಂಬ ಭಾವದೊಂದಿಗೆ ಮತ್ತೆ ಪ್ರಾರಂಭದಿಂದ ಬಂಡೆಯನ್ನು ಏರುತ್ತಿತ್ತು. ವಿಷಾದದಿಂದ ಕುಳಿತಿದ್ದ ಈತ ಅಯ್ಯೋ ಹುಚ್ಚು ಜೇಡನೇ ಬಂಡೆಯು ಪಾಚಿಗಟ್ಟಿ ಬಹಳಷ್ಟು ಜಾರುತ್ತಿದೆ ಆದರೂ ನೀನು ಮತ್ತೆ ಮತ್ತೆ ಏರಲು ಪ್ರಯತ್ನಿಸುತ್ತಾ ಇದ್ದೀಯಲ್ಲಾ ಎಂದು ಮುಸಿ ನಗತೊಡಗಿದ. ನಿನ್ನ ಛಲವನ್ನು ಮೆಚ್ಚಲೇ ಬೇಕು ಎಂದು ಯೋಚಿಸುತ್ತಿದ್ದಂತೆ ಜೇಡ ಮತ್ತೆ ಆಯತಪ್ಪಿ ಬಿತ್ತು, ಮತ್ತೆ ಸೋಲನ್ನು ಮರೆತು ಪ್ರಾರಂಭದಿಂದ ಹತ್ತಲು ಶುರು ಮಾಡಿತು. ಜೇಡವು ಬೀಳುತ್ತಲೇ ಇತ್ತು, ಮತ್ತೆ ಹತ್ತುತ್ತಲೇ ಇತ್ತು, ಈತ ವ್ಯಂಗ್ಯವಾಗಿ ನಗುತ್ತಿದ್ದ. ಅದ್ಯಾವುದರ ಪರಿವೆಯೂ ಇಲ್ಲದಂತೆ ಜೇಡ ತನ್ನ ಪಾಡಿಗೆ ತನ್ನ ಪ್ರಯತ್ನವನ್ನು ಮಾಡುತ್ತಿತ್ತು.

ಒಂದಷ್ಟು ಸಮಯ ಕಳೆದಾಗ ವ್ಯಂಗ್ಯವಾಗಿ ನಗುತ್ತಿದ್ದ ಈತ ಗಂಭೀರವಾಗಿ ಜೇಡವನ್ನು ನೋಡತೊಡಗಿದ. ಜೇಡದ ನಿರಂತರ ಪ್ರಯತ್ನ, ಶ್ರಮ, ಹಲವು ಬಾರಿ ಬಿದ್ದಿದ್ದು ಎಲ್ಲವು ತನ್ನ ವ್ಯವಹಾರದಲ್ಲಾದ ಸೋಲುಗಳನ್ನು ನೆನಪಿಸುತ್ತಿದ್ದವು. ಜೇಡವು ಕೊನೆಗೂ ಹಲವಾರು ಪ್ರಯತ್ನಗಳು ಮತ್ತು ನೋವನ್ನನುಭವಿಸಿದ ನಂತರ ಬಂಡೆಯನ್ನೇರಲು ಯಶಸ್ವಿಯಾಯಿತು. ಜೀವನದಲ್ಲಿ ಸೋತು ಆಕಾಶ ನೋಡುತ್ತಿದ್ದಾತ ಇದನ್ನು ನೋಡಿ ದಂಗಾಗಿ ಹೋದ. ಅಯ್ಯೋ ಈ ಜೇಡನಿಗಿಂತಲೂ ನಾನು ಕೀಳಾಗಿಬಿಟ್ಟೆನೇ? ಅದಕ್ಕಿರುವ ಹಠ, ನಿರಂತರ ಪ್ರಯತ್ನ, ಸೋಲನ್ನು ಮರೆತು ಹೊಸ ಉತ್ಸಾಹವನ್ನು ಮೂಡಿಸಿಕೊಳ್ಳುವ ಮನೋಭಾವ ನನ್ನಲ್ಲಿ ಇಲ್ಲವಾಯಿತೇ ಎಂದು ಯೋಚಿಸಿದ. ಗುಹೆಯೊಳಗಿಂದ ಹೊಸ ಉತ್ಸಾಹದಿಂದ ಎದ್ದು ತನ್ನ ಹಳ್ಳಿಗೆ ಮರಳಿ ನಿರಂತರ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ತನ್ನ ವ್ಯವಹಾರ ವಹಿವಾಟಿನಲ್ಲಿ ಗೆದ್ದು ಶಹಬ್ಬಾಸ್ ಎನಿಸಿಕೊಂಡ.



ಮನುಷ್ಯ ಸೋಲುವುದು ಬದುಕು ಅಥವಾ ಸಂದರ್ಭ, ಸನ್ನಿವೇಶಗಳು ನಮ್ಮನ್ನು ಸೋಲಿಸಿದಾಗ ಅಲ್ಲ, ಬದಲಿಗೆ ಗೆಲುವಿನ ಕಡೆಗಿನ ನಮ್ಮ ಪ್ರಯತ್ನ ಕಡಿಮೆಯಾದಾಗ ಅಥವಾ ಪ್ರಯತ್ನ ನಿಂತಾಗ ನಿಜವಾಗಿಯೂ ಸೋಲುತ್ತೇವೆ. ಸೋಲೆನ್ನುವುದು ಮನುಷ್ಯನಿಗೆ ಪ್ರಯತ್ನದಲ್ಲಿ ಕುಂಟಿತವಾಗಿರುವುದನ್ನು ಸೂಚಿಸುವ ಸಂದರ್ಭವಷ್ಟೇ. ಆದ್ದರಿಂದ ಬದುಕಿನಲ್ಲಿ ಗೆಲುವು ದಕ್ಕುವವರೆಗೂ ನಿರಂತರವಾಗಿ ಪ್ರಯತ್ನಿಸುತ್ತಲೇ ಇರಬೇಕು. ಸಾಧಕರೆಲ್ಲರೂ ಹತ್ತು ಹಲವು ಸೋಲುಗಳು, ನೋವುಗಳು, ಹತಾಶೆಗಳ ನಂತರವೇ ಯಶಸ್ಸಿನ ಮೆಟ್ಟಿಲನ್ನೇರಿದ್ದಾರೆ, ಸಾಧಕರಾಗಿ ಎಲ್ಲೆಡೆ ಗುರುತಿಸಿಕೊಂಡಿದ್ದಾರೆ. ಆದರೆ ಜೀವನದಲ್ಲಿ ಆತ್ಮವಿಶ್ವಾಸಕ್ಕೆ ಎಂದೂ ಕೊರತೆಯಾಗದಿರಲಿ.

ಲೇಖನ
■ ಸಂತೋಷ್ ರಾವ್ ಪೆರ್ಮುಡ
ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ ತಾಲೂಕು
ದ.ಕ ಜಿಲ್ಲೆ–574198
ದೂ:9742884160



# ತಾಳಿಕೋಟೆ ಶ್ರೀ ಸಂಗಮೇಶ್ವರ ಪ್ರೌಢಶಾಲೆ ಶಾಲಾ ಸಂಸತ್ ಚುನಾವಣೆ



■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಶ್ರೀ ಎಸ್.ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಪ್ರೌಢಶಾಲೆಯಲ್ಲಿ 2026-2027ನೇ ಶೈಕ್ಷಣಿಕ ಸಾಲಿನ ಶಾಲಾ ಸಂಸತ್ತಿನ ಚುನಾವಣೆ ನಡೆಸಲಾಯಿತು.

ವಿದ್ಯಾರ್ಥಿಗಳಲ್ಲಿ ಮತದಾನ ಜಾಗೃತಿ ಅರಿವು ಮೂಡಿಸುವ ಕುರಿತು ತಂತ್ರಜ್ಞಾನ ಬಳಸಿ ಮತದಾನ ನಡೆಸಲಾಯಿತು. ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಮತದಾನ ಹೇಗೆ ಮಾಡುವುದು ಎಂದು ಪ್ರೌಢಶಾಲೆಯ ಶಿಕ್ಷಕ ಎಸ್.ವಿ. ಜಾಮಗೊಂಡಿ ವಿವರಿಸಿದರು.

ಮತಗಟ್ಟೆ ಅಧಿಕಾರಿಯಾಗಿ ಪ್ರೌಢಶಾಲೆಯ ಮುಖ್ಯಸ್ಥ ಅಶೋಕ ಕಟ್ಟಿ ಕಾರ್ಯ ನಿರ್ವಹಿಸಿದರು. ಮತದಾನ ಮತಗಟ್ಟೆ ಸಹಾಯಕರಾಗಿ ಸಿಬ್ಬಂದಿಗಳಾಗಿ ಎಸ್.ಸಿ.ಗುಡಗುಂಟಿ. ಬಿ.ಆಯ್. ಹಿರೇಹೊಳಿ, ಎಮ್.ಎಸ್.ರಾಯಗೊಂಡ, ಯು.ಎಚ್.ಗಟನೂರ, ಸಿದ್ದನಗೌಡ ಮುದನೂರ, ಸುನೀಲ ಮತ್ತಿಗಟ್ಟಿ, ಶ್ರೀಮತಿ ರೇಣುಕಾ ಬಿರಾದಾರ, ಅವರು ಕಾರ್ಯ ನಿರ್ವಹಿಸಿದರು.

ಮತದಾನ ಕಾರ್ಯ ಮುಗಿದ ಮೇಲೆ ಮತ ಎಣಿಕೆ ಕಾರ್ಯ ನಡೆಯಿತು ಮತ ಎಣಿಕೆ ಕಾರ್ಯ ಶಿಕ್ಷಕ ಬಿ.ಆಯ್.ಹಿರೇಹೊಳಿ ನಡೆಸಿದರು. 8ನೇ ತರಗತಿಯ ವರ್ಗ ಪ್ರತಿನಿಧಿಗಳಾಗಿ ಗಣೇಶ ನೆ ರಾಠೋಡ, ಲಕ್ಷ್ಮಿ ಚವಾಣ, 9ನೇ ತರಗತಿ ವರ್ಗ ಪ್ರತಿನಿಧಿಯಾಗಿ ಅಬೂಬಕರ ಶೇಖ, ಸಪ್ನಾ.ಡಿ.ಜಾಧವ, 10ನೇ ತರಗತಿ ವರ್ಗ ಪ್ರತಿನಿಧಿಯಾಗಿ ಪುಟ್ಟರಾಜ ರಾಠೋಡ, ಚಂದ್ರಕಲಾ ದ್ಯಾಸರ, ಜಿಎಸ್ ಗಳಾಗಿ ರಾಹುಲ ರಾಠೋಡ, ಮತ್ತು ಲಲಿತಾ ಚವಾಣ ಆಯ್ಕೆಯಾದರು.

ಆಯ್ಕೆಯಾದ ಎಲ್ಲಾ ಪ್ರತಿನಿಧಿಗಳಿಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕರಾದ ಎಚ್.ಎಸ್.ಪಾಟೀಲ, ಕಾರ್ಯದರ್ಶಿ ಸಚಿನ.ಎಚ್. ಪಾಟೀಲ, ಆಡಳಿತಾಧಿಕಾರಿ ಕಿರಣ.ಎಚ್.ಪಾಟೀಲ ಮತ್ತು ಪ್ರೌಢಶಾಲೆಯ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದರು.

# ದೇವದುರ್ಗ ದುರಂತ ಸ್ಥಳಕ್ಕೆ ಸಂಸದ ಜಿ. ಕುಮಾರ ನಾಯಕ ಭೇಟಿ



ಯಾದಗಿರಿ:ದೇವದುರ್ಗ ಪಟ್ಟಣದಲ್ಲಿ ಕಟ್ಟಡದ ಮೇಲ್ಛಾವಣಿ ಕುಸಿದು ಮೂವರು ಯುವಕರು ಮೃತಪಟ್ಟ ದುರಂತ ಸ್ಥಳಕ್ಕೆ ಸಂಸದ ಜಿ. ಕುಮಾರ ನಾಯಕ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಘಟನಾ ಸ್ಥಳದಲ್ಲಿ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದ ಅವರು, ದುರಂತಕ್ಕೆ ಕಾರಣವಾದ ಅಂಶಗಳ ಕುರಿತು ಸವಿಸ್ತಾರವಾಗಿ ವಿಚಾರಣೆ ನಡೆಸಿದರು. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ ಸಂಸದರು, ಸರ್ಕಾರದಿಂದ ಸೂಕ್ತ ಪರಿಹಾರ ದೊರಕುವಂತೆ ಮುಖ್ಯಮಂತ್ರಿ ಅವರೊಂದಿಗೆ ವೈಯಕ್ತಿಕವಾಗಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ದುರಂತಕ್ಕೆ ಕಾರಣವಾದ ಕಟ್ಟಡದ ಮಾಲೀಕರು ಹಾಗೂ ಸಂಬಂಧಪಟ್ಟವರ ವಿರುದ್ಧ ಕಾನೂನುಬದ್ಧವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಘಟನೆಯ ಕುರಿತು ಸಮಗ್ರ ತನಿಖೆ ನಡೆಸಿ, ನಿರ್ಲಕ್ಷ್ಯ ಕಂಡುಬಂದರೆ ತಪ್ಪಿತಸ್ಥರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಜರುಗಿಸಬೇಕು ಎಂದು ನಿರ್ದೇಶನ ನೀಡಿದರು.

ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪಟ್ಟಣದಲ್ಲಿರುವ ಶಿಥಿಲಾವಸ್ಥೆಯ ಕಟ್ಟಡಗಳ ಸಮೀಕ್ಷೆ ನಡೆಸಿ, ಸಾರ್ವಜನಿಕರ ಸುರಕ್ಷತೆಗಾಗಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ರಾಜಶೇಖರ್ ನಾಯಕ್, ರಾಮಣ್ಣ ಇರಬಗೇರಾ, ಶರಣಗೌಡ ಗೌರಂಪೇಟೆ, ಜಯಂತರಾವ್ ಪತಂಗೆ, ಆದನಗೌಡ ಬುಂಕಲದೊಡ್ಡಿ, ಶಿವರಾಜ ಗೆಜ್ಜೆಬಾವಿ, ತಹಶೀಲ್ದಾರ್ ನಾಗಮ್ಮ ಕಟ್ಟಿಮನಿ, ಪುರಸಭೆ ಪೌರಾಯುಕ್ತರು, ಪೊಲೀಸ್ ಇಲಾಖೆ ಸಿಬ್ಬಂದಿ, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ವಾಣಿಜ್ಯ ಮಳಿಗೆಗಳ ನಿರ್ಮಾಣಕ್ಕೆ ಚಾಲನೆ



ನರೇಗಲ್ಲ: ನರೇಗಲ್ಲ ಪಟ್ಟಣದ ಬಸ್ ನಿಲ್ದಾಣದ ರಸ್ತೆಬದಿಯಲ್ಲಿ ನಿರ್ಮಿಸಲಾಗುತ್ತಿರುವ ವಾಣಿಜ್ಯ ಮಳಿಗೆಗಳ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು.

ರೋಣ ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಜಿ. ಪಾಟೀಲ, ಮಾತನಾಡಿ, ಕಾಮಗಾರಿಯನ್ನು ಗುಣಮಟ್ಟದೊಂದಿಗೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹಾಗೂ ರೋಣದ ಮಹಾಲಕ್ಷ್ಮೀ ಕನ್‌ಸ್ಟ್ರಕ್ಷನ್ ಆಶ್ರಯದಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಬಸ್ ನಿಲ್ದಾಣದ ಸುತ್ತಮುತ್ತ ವಾಣಿಜ್ಯ ಮಳಿಗೆಗಳು ನಿರ್ಮಾಣವಾಗುವುದರಿಂದ ಪಟ್ಟಣದ ವ್ಯಾಪಾರ ವಹಿವಾಟು ಮತ್ತಷ್ಟು ವೃದ್ಧಿಯಾಗಲಿದೆ. ವ್ಯಾಪಾರಿಗಳಿಗೆ ಸುರಕ್ಷಿತ ಹಾಗೂ ಸುಸಜ್ಜಿತ ಮಳಿಗೆಗಳು ದೊರೆಯುವುದರಿಂದ ಮಳೆ, ಗಾಳಿ ಹಾಗೂ ಬಿಸಿಲಿನ ತೊಂದರೆ ಇಲ್ಲದೆ ವ್ಯಾಪಾರ ನಡೆಸಲು ಅನುಕೂಲವಾಗಲಿದೆ ಎಂದು ಹೇಳಿದರು.

ನರೇಗಲ್ಲ ಪಟ್ಟಣ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ವ್ಯಾಪಾರದ ವಿಸ್ತರಣೆ ಹಾಗೂ ಬಸ್ ನಿಲ್ದಾಣದ ಸುತ್ತಮುತ್ತ ವ್ಯವಸ್ಥಿತ ವಾಣಿಜ್ಯ ಚಟುವಟಿಕೆಗಳಿಗೆ ಮಳಿಗೆಗಳ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮವು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಕಾಮಗಾರಿ ವೇಳೆ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ನರೇಗಲ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶರಣಪ್ಪ ಬೆಟಗೇರಿ, ಎಂ.ಎಸ್. ಧಡೇಸೂರಮಠ, ಹನಮಂತಪ್ಪ ಅಬ್ಬಿಗೇರಿ, ನಿಂಗನಗೌಡ ಲಕ್ಕನಗೌಡ, ಅಲ್ಲಾಬಕ್ಷಿ ನಧಾಫ್, ಸಂತೋಷ ಹನಮಸಾಗರ, ಸದ್ದಾಂ ನಶೇಖಾನ, ಶೇಖಪ್ಪ ಕೆಂಗಾರ, ಶೇಖಪ್ಪ ಜುಟ್ಲದ, ಕಳಕನಗೌಡ ಪೊಲೀಸ್ ಪಾಟೀಲ, ಮುತ್ತಪ್ಪ ನೂಲ್ಕಿ, ಈರಪ್ಪ ಮಣ್ಣೊಡ್ಡರ, ಸಂಜು ದೊಡ್ಡಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದೇವರು, ಗುರುಹಿರಿಯರ ಮೇಲೆ ಗೌರವ-ಭಕ್ತಿ ಇರಬೇಕು

## ಹೆಚ್ ಡಿ ಕೋಟೆಯಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಲೋಕಾರ್ಪಣೆ। ಮಾಜಿ ಸಚಿವ ಎಂ.ಶಿವಣ್ಣ ಕಿವಿಮಾತು


■ ಉದಯರಶ್ಮಿ ದಿನಪತ್ರಿಕೆ



ಎಚ್ ಡಿ ಕೋಟೆ : ತಂದೆ-ತಾಯಿ, ದೇವರು ಹಾಗೂ ಗುರು-ಹಿರಿಯರ ಮೇಲೆ ಗೌರವ, ಭಕ್ತಿ ಎಲ್ಲರಿಗೂ ಇರಬೇಕು. ಇಲ್ಲವಾದಲ್ಲಿ ಜಗತ್ತಿನಲ್ಲಿ ಏನೇನೋ ಆಗುತ್ತದೆ ಎಂದು ಮಾಜಿ ಸಚಿವ ಎಂ.ಶಿವಣ್ಣ ಹೇಳಿದರು.

ಪಟ್ಟಣದ ಬನ್ನಿಮರದ ರಸ್ತೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ವಿಗ್ರಹ ಪುನರ್ ಪ್ರತಿಷ್ಠಾಪನಾ ಮಹೋತ್ಸವ ಮತ್ತು ನೂತನ ದೇವಸ್ಥಾನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಸೇವಾ ಟ್ರಸ್ಟ್ ನವರು, ಶ್ರೀ ಚಾಮುಂಡಿ ತಾಯಿಗೆ ದೇವಸ್ಥಾನ ಕಟ್ಟಿಸುವ ಮೂಲಕ ಹೆಚ್ ಡಿ ಕೋಟೆಗೆ ಒಂದು ಕಳೆ ತಂದಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಇಂತಹ ಪುಣ್ಯಕಾರ್ಯಗಳಿಗೆ ಧನಸಹಾಯ ಮಾಡುತ್ತಾ ಬಂದಿದ್ದಾರೆ. ನಾನು ಕೂಡ ಅನೇಕ ಸವಾಲುಗಳ ನಡುವೆ ಧರ್ಮಸ್ಥಳದಲ್ಲೇ ಮದುವೆ ಆಗಿದ್ದೆ.ಹೀಗಾಗಿ ಧರ್ಮಸ್ಥಳದ ಸೇವಾಕಾರ್ಯ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ನಾನು ಕೂಡ ದೇವಸ್ಥಾನಕ್ಕೆ ಕೈಲಾದ ಸಹಾಯ ಮಾಡುತ್ತೇನೆ ಎಂದು ಹೇಳಿದರು.

ಶ್ರೀ ಆದಿಚುಂಚಗಿರಿ ಮಹಾಸಂಸ್ಥಾನ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ದೇವಾಲಯಗಳು ಸಮಾಜದಲ್ಲಿ ಭಾವೈಕ್ಯತೆ, ಸೌಹಾರ್ದತೆ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸುವ ಪವಿತ್ರ ಕೇಂದ್ರಗಳಾಗಿವೆ. ದೇವರು ಮನುಷ್ಯನಿಗೆ ಬದುಕಲು ಅಗತ್ಯವಾದ ಅನ್ನ, ನೀರು, ಗಾಳಿ, ಉತ್ತಮ ಪರಿಸರ ಹಾಗೂ ನೆಲೆಸಲು ಭೂಮಿಯನ್ನು ಕರುಣಿಸಿದ್ದಾನೆ. ಆತನ ಈ ಅಮೂಲ್ಯ ಕೊಡುಗೆಗಳಿಗೆ ಕೃತಜ್ಞತೆಯ ಸಂಕೇತವಾಗಿ ದೇವಾಲಯಗಳನ್ನು ನಿರ್ಮಿಸಿ, ಭಕ್ತಿ



ಮತ್ತು ಸಮರ್ಪಣೆಯನ್ನು ಅರ್ಪಿಸುವುದು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯಾಗಿದೆ. ಈ ನೂತನ ದೇವಸ್ಥಾನವು ಭಕ್ತಿ, ಸೇವೆ ಹಾಗೂ ಸಮರ್ಪಣೆಯ ಪ್ರತೀಕವಾಗಿ ಮುಂದಿನ ಪೀಳಿಗೆಗೂ ಮಾರ್ಗದರ್ಶಿಯಾಗಲಿ ಎಂದು ಆಶಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನೂತನ ದೇವಸ್ಥಾನ ಕಟ್ಟಡವನ್ನು ಲೋಕಾರ್ಪಣೆ ಮಾಡಿದರು.

ವೇದಿಕೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಂ. ಶಿವಣ್ಣ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಎಂ.ಸಿ ದೊಡ್ಡನಾಯಕ, ಆರ್ ನಟರಾಜು, ಆರ್ ಪಿ ವೀರಪ್ಪ, ಜಿ ಎನ್ ನಾರಾಯಣಗೌಡ, ನಾಗಣ್ಣ, ಹೆಚ್ ಕೆ ಪ್ರಕಾಶ್, ರಾಮಯ್ಯ, ಲಕ್ಷ್ಮೀನರಸಿಂಹ, ಮಂಜುನಾಥ್, ಶ್ರೀಕಾಂತ್, ಎಸ್ ರಮೇಶ್, ನಾಗೇಗೌಡ, ಕನ್ನಡ ಪ್ರಮೋದ್, ಚಾಕಳ್ಳಿ ಕೃಷ್ಣ, ಜಿ.ವಿ. ಮಧುಸೂದನ್, ಮಿಲ್ ನಾಗರಾಜು, ಧನರಾಜ್, ನರಸಿಂಹೇಗೌಡ, ಅರ್ಚಕರಾದ ಸತೀಶ್ ಆರಾಧ್ಯ, ರಘು ಕೀರ್ತಿ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿದರು.

# ಮಾನವೀಯ ಮೌಲ್ಯಗಳು, ಭಾವೈಕ್ಯತೆ ಬೆಳೆಸುವುದೇ ಸೇವಾದಳ ಉದ್ದೇಶ

## ಭಾರತ ಸೇವಾದಳ ಶಿಕ್ಷಕರ ಪುನಃಶ್ಚೇತನ ಶಿಬಿರ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್.ಆಲಗೂರ ಅಭಿಮತ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ನಾವು ನಮಗಾಗಿ ಬದುಕುವುದಕ್ಕಿಂತ ಸಮಾಜಕ್ಕಾಗಿ ಬದುಕಿದಾಗ ಮಾತ್ರ ಸಮಾಜದಲ್ಲಿ ಒಳ್ಳೆಯ ಗೌರವ ಗಳಿಸಲು ಮತ್ತು ಗುರುತಿಸಿಕೊಳ್ಳಲು ಸಾಧ್ಯ. ದೇಶ ನಮಗೇನು ನೀಡಿದೇ ಎನ್ನುವುದಕ್ಕಿಂತ ದೇಶಕ್ಕಾಗಿ ನಾವೇನು ಮಾಡುತ್ತಿದ್ದೇವೆ ಎನ್ನುವದು ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್.ಆಲಗೂರ ಹೇಳಿದರು.

ಸಿಂದಗಿ ನಗರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿಜಯಪುರ ಭಾರತ ಸೇವಾದಳ ಜಿಲ್ಲಾ ಸಮಿತಿ, ಸಿಂದಗಿ ತಾಲೂಕು ಸಮಿತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇವರುಗಳ ಸಹಯೋಗದಲ್ಲಿ ಹಮ್ಮಿಕೊಂಡ ತಾಲೂಕು ಮಟ್ಟದ ಭಾರತ ಸೇವಾದಳ ಶಿಕ್ಷಕರ ಪುನಃಶ್ಚೇತನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಸೇವಾದಳ ಶಿಸ್ತು, ದೇಶಪ್ರೇಮ, ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಸಂಸ್ಥೆಯಾಗಿದೆ. ಇದರ ಚಟುವಟಿಕೆಗಳನ್ನು ಶಾಲೆಯ ಎಲ್ಲಾ ಮಕ್ಕಳಿಗೂ ಮುಟ್ಟುವಂತೆ ಶಿಕ್ಷಕರು ಕಾರ್ಯ ನಿರ್ವಹಿಸಬೇಕು. ಭಾರತ ಸೇವಾದಳ ಮುಖಾಂತರ ಶಿಕ್ಷಕರು ಮಕ್ಕಳಲ್ಲಿ ರಾಷ್ಟ್ರಾಭಿಮಾನ, ರಾಷ್ಟ್ರೀಯ ಭಾವೈಕ್ಯತೆ, ನೈತಿಕ ಮೌಲ್ಯಗಳು ಹಾಗೂ ಸೇವಾ ಮನೋಭಾವನೆಯ ವಿಚಾರಧಾರೆಗಳನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದರು.

ಈ ವೇಳೆ ಕ್ಷೇತ್ರ ಸಮನ್ವಯಾಧಿಕಾರಿ ಆಯ್.ಎಸ್. ಟಕ್ಕೆ, ಸೇವಾದಳ ಸಮಿತಿ ಮಹಿಳಾ ಸದಸ್ಯೆ ಶ್ಯಾಮಲಾ ಮಂದೇವಾಲಿ ಮಾತನಾಡಿದರು. ಭಾರತ ಸೇವಾ ದಳದ ವಲಯ ಸಂಘಟಿಕ ನಾಗೇಶ ಡೋಣೂರ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ರಮೇಶ ಬಿರಾದಾರ, ಸೇವಾದಳ ಜಿಲ್ಲಾ ಸಮಿತಿ ಸದಸ್ಯ ಎಸ್.ಡಿ.ಕುಂಬಾರ, ತಾಲೂಕು ಸಮಿತಿ ಸದಸ್ಯ ಬಸವರಾಜ ಲಿಂಗದಳ್ಳಿ, ಶಿಕ್ಷಕ ಮಹಿಳಾ ಪ್ರತಿನಿಧಿ ಎಸ್.ಎಸ್.ಕುಂಬಾರ, ಶಾಲಾ ಮುಖ್ಯ ಶಿಕ್ಷಕ ಮಹಾದೇವ ಬಿರಾದಾರ ಸೇರಿದಂತೆ ವಿವಿಧ ಶಾಲೆಯ ತಾಲೂಕು ಸಂಘಟಕ ಡಿ.ಸಿ.ಜಾಧವ್ ನಿರೂಪಿಸಿದರು. ಸಂಪನ್ಮೂಲ ಶಿಕ್ಷಕ ಆರ್.ಆರ್.ನಿಂಬಾಳ್ಕರ್ ಸ್ವಾಗತಿಸಿದರು. ಶಿಕ್ಷಕ ಸಂಗಮೇಶ ಮಲ್ಲೇದ ವಂದಿಸಿದರು.

# ಹೊತಪೇಠ ರಸ್ತೆ ಅವ್ಯವಸ್ಥೆ: ಕಂಕರ್ ಹಾಕಿ ತಿಂಗಳುಗಳು ಕಳೆದರೂ ಕಾಮಗಾರಿ ಪೂರ್ಣವಿಲ್ಲ; ಜನರ ಆಕ್ರೋಶ

ಶಹಾಪುರ: ತಾಲೂಕಿನ ಹೊತಪೇಠ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಮುಖ್ಯ ರಸ್ತೆಯಿಂದ ಗ್ರಾಮ ಪಂಚಾಯಿತಿ ಕಚೇರಿವರೆಗೆ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಆರಂಭಿಸಿ ಕಂಕರ್ ಹಾಕಲಾಗಿದೆ. ಆದರೆ ಹಲವು ತಿಂಗಳುಗಳು ಕಳೆದರೂ ಡಾಂಬರೀಕರಣ ಕಾಮಗಾರಿ ಪೂರ್ಣಗೊಳ್ಳದ ಕಾರಣ ರಸ್ತೆ ಸಂಪೂರ್ಣ ಕಂಕರಮಯವಾಗಿದ್ದು, ಸಾರ್ವಜನಿಕರು ನಿತ್ಯ ಸಂಚಾರಕ್ಕೆ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ಗ್ರಾಮದಿಂದ ಶಹಾಪುರ ಪಟ್ಟಣಕ್ಕೆ ಪ್ರತಿದಿನ ನೂರಾರು ಜನರು ಉದ್ಯೋಗ, ವ್ಯಾಪಾರ, ಶಿಕ್ಷಣ ಹಾಗೂ ಇತರೆ ಅಗತ್ಯ ಕೆಲಸಗಳಿಗಾಗಿ ಸಂಚರಿಸುತ್ತಾರೆ. ಆದರೆ ರಸ್ತೆಯ ದುಸ್ಥಿತಿಯಿಂದ ದ್ವಿಚಕ್ರ ವಾಹನ ಸವಾರರು ಜೀವಭಯದಲ್ಲೇ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಕಂಕರನಿಂದಾಗಿ ಹಲವು ಬಾರಿ ವಾಹನಗಳು ಜಾರಿ ಬಿದ್ದು ಅಪಘಾತಗಳು ಸಂಭವಿಸಿರುವುದಾಗಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಟಂಟಂ ಆಟೋ ಚಾಲಕರು ಹಾಗೂ ಮಾಲೀಕರು ರಸ್ತೆ ಹದಗೆಟ್ಟಿರುವುದರಿಂದ ವಾಹನಗಳ ಬಿಡಿಭಾಗಗಳು ಆಗಾಗ



ಹಾಳಾಗುತ್ತಿದ್ದು, ಆದಾಯಕ್ಕಿಂತ ದುರಸ್ತಿ ವೆಚ್ಚವೇ ಹೆಚ್ಚಾಗುತ್ತಿದೆ ಎಂದು ಅಳಲು ತೋಡಿಕೊಂಡಿದ್ದಾರೆ. ಇದೇ ಕಾರಣದಿಂದ ಕೆಲವು ಬಸ್‌ಗಳ ಸಂಚಾರವೂ ಅಸ್ತವ್ಯಸ್ತಗೊಂಡಿದೆ ಎನ್ನಲಾಗಿದೆ.

ರಾತ್ರಿವೇಳೆ ರಸ್ತೆ ಇನ್ನಷ್ಟು ಅಪಾಯಕಾರಿಯಾಗಿದ್ದು, ಗರ್ಭಿಣಿಯರು ಹಾಗೂ ತುರ್ತು ಚಿಕಿತ್ಸೆಗೆ ತೆರಳುವ ರೋಗಿಗಳು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ಕುರಿತು ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಸ್ಪಂದನೆ ಸಿಗುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಕರೆ ಮಾಡಿದರೂ ಕರೆ ಸ್ವೀಕರಿಸುತ್ತಿಲ್ಲ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮದ ಯುವ ಮುಖಂಡ ಶಶಿಪಾಲ ರೆಡ್ಡಿ, ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಗ್ರಾಮಸ್ಥರ ಪ್ರಕಾರ, ಈ ಹಿಂದೆಯೂ ರಸ್ತೆ ದುರಸ್ತಿ ಹೆಸರಿನಲ್ಲಿ ಮರಂ ಹಾಕಿ ತಿಂಗಳುಗಟ್ಟಲೆ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಇದೀಗ ಕಂಕರ್ ಹಾಕಿ ಹಾಗೆಯೇ ಬಿಟ್ಟಿರುವುದರಿಂದ ಜನರ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ ಎಂದು ದೂರಿದ್ದಾರೆ.

ಗ್ರಾಮದ ಪ್ರಮುಖ ರಸ್ತೆಯಾಗಿರುವುದರಿಂದ ಪ್ರತಿದಿನ ಶಾಲೆ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು, ರೈತರು ಹೊಲಗದ್ದೆಗಳಿಗೆ ತೆರಳುವವರು, ವೃದ್ಧರು, ಮಕ್ಕಳು ಹಾಗೂ ಜಾನುವಾರುಗಳು ಸಹ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆ ಮೇಲೆ ಎದ್ದು ನಿಂತಿರುವ ಕಂಕರಗಳಿಂದ ಸಂಚಾರ ದುಸ್ತರವಾಗಿದೆ.

# ಧರ್ಮ ಚಿಂತನಗೋಷ್ಠಿ

ಚನ್ನಮ್ಮನ ಕಿತ್ತೂರು: ಬಸವಾದಿ ಶರಣರ ವಚನಗಳನ್ನು ಮನೆ-ಮನೆಗೆ ತಲುಪಿಸುವ ಕಾರ್ಯ ಲಿಂ.ಲಿಂಗಾನಂದ ಸ್ವಾಮಿಗಳು ಮಾಡಿದ್ದಾರೆ. ವಚನ ಸಾಹಿತ್ಯದ ಕೀರ್ತಿ ಯಾರಿಗಾದರೂ ಸಲ್ಲುತ್ತದೆ ಎಂದರೆ ಇದು ಇವರಿಗೆ ಸಲ್ಲುತ್ತದೆ ಎಂದು ಧಾರವಾಡ ಹೈಕೋರ್ಟ ನ್ಯಾಯವಾದಿ ಕೆ.ಎಸ್. ಕೋರಿಶೆಟ್ಟರ ಹೇಳಿದರು.

ಬೀಡಿ ರಸ್ತೆ ತಿಗಡೊಳ್ಳಿ ಕ್ರಾಸ್ ಬಳಿ ಇರುವ ಬಸವ ಮಂಟಪದಲ್ಲಿ ಜರುಗಿದ ಲಿಂ. ಲಿಂಗಾನಂದ ಸ್ವಾಮಿಜಿಗಳ 51ನೇ ಸ್ಮರಣೆ ಹಾಗೂ ಧರ್ಮ ಚಿಂತನ ಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿ, 2031 ರಾಷ್ಟ್ರೀಯ ಬಸವಧಳ ಸ್ಥಾಪಿಸುವ ಮೂಲಕ ಬಸವಾದಿ ಶರಣರ ವಚನಗಳನ್ನು ಪ್ರಚಾರ ಮಾಡಿದರು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿ ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿ ಇದೊಂದು ಉತ್ತಮ ಕೆಲಸವಾಗಿದೆ. ಕಿತ್ತೂರಿನಲ್ಲಿ ಬಸವಧಳ ಸಂಘಟನೆ ಧರ್ಮದ ಕಳಕಳಿಗೆ ಸಮಾಜಮುಖಿ ಕೆಲಸ ಮಾಡುತ್ತಿರುವುದು. ಎಲ್ಲರಿಗೂ ಸಂತಸ ಮೂಡಿಸಿದೆ. ಈಗಾಗಲೇ ಸರ್ಕಾರದಿಂದ ರೂ. 15 ಲಕ್ಷ ಅನುದಾನ ನೀಡಿದ್ದು ಇನ್ನೂ ಹೆಚ್ಚಿನ ಸಹಾಯ ಸಲ್ಲಿಸುವುದಾಗಿ ಹೇಳಿದರು.

ಮುಖ್ಯ ಅತಿಥಿ ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ ಎಲ್ಲರೂ ಸೇರಿ ಧರ್ಮದ ಕಾರ್ಯ ಮಾಡೋಣ ನಿಮ್ಮೆಲ್ಲರ ಸಹಕಾರ ಅಗತ್ಯ. ಬಸವಧಳ ಸಂಘಟನೆ ಸಾಮಾಜಿಕ ಉತ್ತಮ ಕೆಲಸ ಮಾಡುತ್ತಿದೆ. ಈ ಕಟ್ಟಡಕ್ಕೆ ಈಗಾಗಲೇ ರೂ. 1 ಲಕ್ಷ ದೇಣಿಗೆ ನೀಡಿದ್ದು ಇನ್ನೂ ಬೇಕಾದ ಸಹಾಯ ಹಸ್ತ ನೀಡುವೆ ಇದಲ್ಲದೇ ಕೆನರಾ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಕೇಂದ್ರ ಸರ್ಕಾರದ ಅನುದಾನಡಿಯಲ್ಲಿ ಅನುದಾನ ಕೊಡಿಸುವ ಭರವಸೆ ನೀಡಿದರು.

ರಾಜಗುರು ಸಂಸ್ಥಾನ ಮಡಿವಾಳ ರಾಜಯೋಗಿಂದ್ರ ಸ್ವಾಮಿಜಿ ಮಾತನಾಡಿ ಎಲ್ಲ ನಿಂದನೆ ಸಹಿಸಿಕೊಂಡು ಬಸವಧಳ ಸಂಘಟನೆ ಕಟ್ಟಿ ನಾಡಿನಾದ್ಯಂತ ತಿರುಗಾಡಿ ಶರಣರ ವಚನ ಬಿತ್ತರಿಸುವ ಕೆಲಸ ಲಿಂಗಾನಂದ ಸ್ವಾಮಿಜೀ ಮಾಡಿದರು. ಅವರು ಮಾಡಿದ ದಿಟ್ಟ ಹೋರಾಟ ದೇಶದ ಎಲ್ಲ ಸ್ವಾಮಿಜಿಗಳಿಗೂ ಮಾದರಿಯಾಗಿದೆ. ನಾನು ದೊಡ್ಡವ ಎನ್ನುವುದನ್ನು ಬಿಟ್ಟು ಶರಣರ ವಚನಗಳನ್ನು ಬಿತ್ತರಿಸುವ ಕಾರ್ಯ ಮಾಡೋಣವೆಂದರು.

ದೇಗುಲಹಳ್ಳಿ-ಅಂಬಡಗಟ್ಟಿ ಶ್ರೀಗುರು ಮಡಿವಾಳೇಶ್ವರ ಮಠದ ವೀರೇಶ್ವರ ಸ್ವಾಮಿಜಿ ಮಾತನಾಡಿದರು.

ಸಭೆಯಲ್ಲಿ ಕಸಾಪ ಅಧ್ಯಕ್ಷ ಬಸವರಾಜ ದಳವಾಯಿ, ಅಶೋಕ ಅಳ್ನಾವರ, ಡಾ. ಚಂದ್ರು ಪೋಲಿಸ್‌ಪಾಟೀಲ, ರಮೇಶ ಮೊಕಾಶಿ, ಕಿರಣ ಪಾಟೀಲ, ಡಿ.ಆರ್.ಪಾಟೀಲ, ಕಲ್ಲಪ್ಪ ಕುಗಟಿ, ಅನಿಲ್ ಎಮ್ಮಿ, ಕಿರಣ ವಾಳದ, ಬಸವಧಳ ಸಂಘಟನೆ, ಮಕ್ಕಳು, ಶರಣ-ಶರಣೆಯರಿದ್ದರು.

# ಸುಸ್ಥಿರ ನಾಳೆಗಾಗಿ ಜಲ ಮತ್ತು ವಿದ್ಯುತ್ ಸಂರಕ್ಷಣೆ ನಮ್ಮ ಆದ್ಯ ಕರ್ತವ್ಯ

■ ಉದಯರಶ್ಮಿ ದಿನಪತ್ರಿಕೆ

ಭೂಮಿ ಮತ್ತು ನಮ್ಮ ಭವಿಷ್ಯವನ್ನು ಸುರಕ್ಷಿತವಾಗಿಡಲು ಜಲ ಹಾಗೂ ವಿದ್ಯುತ್ನ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ. ದೈನಂದಿನ ಜೀವನದಲ್ಲಿ ನಾವು ಮಾಡಿಕೊಳ್ಳುವ ಸಣ್ಣ ಬದಲಾವಣೆಗಳೂ ಪರಿಸರದ ಮೇಲೆ ದೊಡ್ಡ ಸಕಾರಾತ್ಮಕ ಪರಿಣಾಮವನ್ನು ಉಂಟುಮಾಡಬಲ್ಲವು. ನೀರನ್ನು ಉಳಿಸುವುದು ಎಂದರೆ ವಿದ್ಯುತ್ ಅನ್ನು ಸಹ ಉಳಿಸುವುದೇ ಆಗಿದೆ; ಏಕೆಂದರೆ ನೀರನ್ನು ಶುದ್ಧೀಕರಿಸಿ ಮನೆಗಳಿಗೆ ಪೂರೈಸಲು ಹೆಚ್ಚಿನ ಪ್ರಮಾಣದ ವಿದ್ಯುತ್ ಬಳಸಲಾಗುತ್ತದೆ. ಆದುದರಿಂದ, ಈ ಎರಡೂ ಅಮೂಲ್ಯ ಸಂಪನ್ಮೂಲಗಳನ್ನು ಸಂರಕ್ಷಿಸುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

**ಜಲ ಸಂರಕ್ಷಣೆ**

ಪ್ರತಿ ಹನಿಯೂ ಅಮೂಲ್ಯ: ಪ್ರತಿಯೊಬ್ಬ ಜೀವಿಯ ಬದುಕಿಗೆ ನೀರು ಅತ್ಯಗತ್ಯ. ಭೂಮಿಯ ಶೇಕಡಾ 70 ರಷ್ಟು ಭಾಗ ನೀರಿನಿಂದ ಕೂಡಿದ್ದರೂ, ಕುಡಿಯಲು ಯೋಗ್ಯವಾದ ಸಿಹಿ ನೀರು ಇರುವುದು ಕೇವಲ ಶೇಕಡಾ 2 ರಷ್ಟು ಮಾತ್ರ. ಜಲ ಸಂರಕ್ಷಣೆ ಎಂದರೆ ಲಭ್ಯವಿರುವ ಈ ಶುದ್ಧ ನೀರನ್ನು ಸಮರ್ಥವಾಗಿ ಬಳಸುವುದು.

ಇಂದು ಹೆಚ್ಚುತ್ತಿರುವ ಜನಸಂಖ್ಯೆ, ಮಾಲಿನ್ಯ ಮತ್ತು ನಿರ್ಲಕ್ಷ್ಯದ ಬಳಕೆಯಿಂದಾಗಿ ಜಲಕ್ಷಾಮವು ಜಾಗತಿಕ ಸಮಸ್ಯೆಯಾಗಿ ಮಾರ್ಪಟ್ಟಿದೆ. ಈಗಾಗಲೇ ಎಲ್‌ನಿನೊ ಹವಾಮಾನ ವೈಪರೀತ್ಯದ ಪರಿಣಾಮದಿಂದಾಗಿ ವಿಶ್ವದಾದ್ಯಂತ ಸಾಮಾನ್ಯ ಹವಾಮಾನ ಮಾದ-ರಿಗಳು ವ್ಯತ್ಯಯಗೊಳ್ಳುತ್ತಿದ್ದು, ದೇಶದಲ್ಲಿ ಅತಿವೃಷ್ಟಿ, ಪ್ರವಾಹ ಮತ್ತು ಬರಗಾಲದಂತಹ ತೀವ್ರ ಪರಿಸ್ಥಿತಿಗಳು ತಲೆದೋರುತ್ತಿವೆ. ಮಳೆಯ ಕೊರತೆಯಿಂದಾಗಿ ನಮ್ಮ ರೈತರ ಕೃಷಿ ಉತ್ಪಾದನೆಯ ಮೇಲೂ ತೀವ್ರ ಪರಿಣಾಮ ಬೀರುತ್ತಿದೆ. ವೇಗವಾದ ನಗರೀಕರಣ ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯು ಜಲ ಸಂಪನ್ಮೂಲಗಳ ಮೇಲೆ ಹೆಚ್ಚಿನ ಒತ್ತಡ ಉಂಟುಮಾಡುತ್ತಿರುವುದರಿಂದ, ಭವಿಷ್ಯದ ಪೀಳಿಗೆಗೆ ನೀರನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**ನೀರನ್ನು ಉಳಿಸುವ ಮಾರ್ಗೋಪಾಯಗಳು**

ಸೋರಿಕೆ ತಡೆಯಿರಿ: ಸೋರಿಕೆಯಾಗುತ್ತಿರುವ ಕೊಳವೆಗಳು. ಪೈಪ್ಗಳು ಮತ್ತು ನೀರು ಸಂಗ್ರಹ ವ್ಯವಸ್ಥೆಗಳನ್ನು ತಕ್ಷಣ ದುರಸ್ತಿ ಮಾಡಿ.

ಮಿತ ಬಳಕೆ: ಮುಖ ತೊಳೆಯುವಾಗ ಹಾಗೂ ಪಾತ್ರೆ





ತೊಳೆಯುವಾಗ ನಳಗಳನ್ನು (ಟ್ಯಾಪ್) ಅನಗತ್ಯವಾಗಿ ತೆರೆದಿಡಬೇಡಿ. ಸ್ನಾನಕ್ಕೆ ಶವರ್ ಬದಲಾಗಿ ಬಕೆಟ್ ಬಳಸಿ.

ಮಳೆನೀರು ಕೊಯ್ಲು: ಮನೆ, ಶಾಲೆ, ಕಚೇರಿ ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅನುಸರಿಸಿ.

ಮರುಬಳಕೆ: ಕುಡಿಯುವ ನೀರನ್ನು ತೋಟಗಾರಿಕೆ ಅಥವಾ ವಾಹನ ತೊಳೆಯಲು ಬಳಸಬೇಡಿ: ಬದಲಿಗೆ ತ್ಯಾಜ್ಯ ಸಂಸ್ಕರಿಸಿದ ನೀರನ್ನು ಬಳಸಿ. ಸಾಧ್ಯವಾದಷ್ಟು 3R ಸೂತ್ರಗಳಾದ ಕಡಿಮೆ ಬಳಕೆ Reduce), ಮರುಬಳಕೆ (Reuse) ಮತ್ತು ಮರು ಸಂಸ್ಕರಣೆ (Recycle) ಮಾದರಿಗಳನ್ನು ಅಳವಡಿಸಿಕೊಳ್ಳಿ.

ಆಧುನಿಕ ಕೃಷಿ: ಕೃಷಿಯಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ವಿಧಾನಗಳನ್ನು ಅಳವಡಿಸಿ.

**ಮೂಲಗಳ ರಕ್ಷಣೆ:** ಕೆರೆ, ನದಿ ಹಾಗೂ ಭೂಗರ್ಭ ಜಲಮೂಲಗಳನ್ನು ಮಾಲಿನ್ಯ ಮತ್ತು ಅತಿಕ್ರಮಣದಿಂದ ರಕ್ಷಿಸಿ, ಅಂತರ್ಜಲ ವೃದ್ಧಿಗಾಗಿ ಗಿಡಗಳನ್ನು ನೆಟ್ಟು ಪೋಷಿಸಿ.

**ವಿದ್ಯುತ್ ಸಂರಕ್ಷಣೆ:** ನಾಳೆಯ ಭವಿಷ್ಯದ ಆಧಾರ: ಆಧುನಿಕ ಜಗತ್ತಿನಲ್ಲಿ ಬೆಳಕು, ಫ್ಯಾನ್, ಮೊಬೈಲ್ ಚಾರ್ಜನಿರ್‌ಂದ ಹಿಡಿದು ದೊಡ್ಡ ಕೈಗಾರಿಕೆಗಳವರೆಗೆ ಎಲ್ಲದಕ್ಕೂ ವಿದ್ಯುತ್ ಅತ್ಯಗತ್ಯ ಆದ-’ರೆ, ನಮ್ಮ ದೇಶದ ವಿದ್ಯುತ್ ಅನ್ನು ಹೆಚ್ಚಾಗಿ ಕಲ್ಲಿದ್ದಲು ಸುಡುವ ಮೂಲಕ ಉತ್ಪಾದಿಸಲಾಗುತ್ತಿದೆ. ಇದರಿಂದಾಗಿ ವಾಯು ಮಾಲಿನ್ಯ ಉಂಟಾಗುತ್ತಿರುವುದಲ್ಲದೆ, ಭೂಮಿಯ ತಾಪಮಾನವೂ ಹೆಚ್ಚುತ್ತಿದೆ. ಜವಾಬ್ದಾರಿಯುತ ವಿದ್ಯುತ್ ಬಳಕೆಯಿಂದ ವೆಚ್ಚ ಕಡಿಮೆಯಾಗುವುದಲ್ಲದೆ, ಪರಿಸರ ಮಾಲಿನ್ಯ ತಗ್ಗಿ ಶಕ್ತಿ ಭದ್ರತೆ ಹೆಚ್ಚುತ್ತದೆ.

ರಾಜ್ಯದ ಶೇಕಡಾ 15–20 ರಷ್ಟು ವಿದ್ಯುತ್ ಉತ್ಪಾದನೆಗೆ ನೀರನ್ನೇ ಪ್ರಮುಖವಾಗಿ ಬಳಸಲಾಗುತ್ತಿದೆ. ಒಂದು ವೇಳೆ ನೀರಿನ ಕೊರತೆಯಾದರೆ, ಜಲವಿದ್ಯುತ್ ಉತ್ಪಾದನೆಯೂ ಕುಂಠಿತಗೊಂಡು ನಮ್ಮ ದೈನಂದಿನ ಬಳಕೆಗೆ ಸಿಗುವ ವಿದ್ಯುತ್ ಪ್ರಮಾಣ ಕಡಿಮೆಯಾಗುತ್ತದೆ. ಆದ್ದರಿಂದ ಜಲ ಸಂರಕ್ಷಣೆಯು ವಿದ್ಯುತ್ ಸಂರಕ್ಷಣೆಯೊಂದಿಗೆ ನೇರ ಸಂಪರ್ಕ ಹೊಂದಿದೆ.

**ವಿದ್ಯುತ್ ಉಳಿಸುವ ಸರಳ ವಿಧಾನಗಳು**

**ಅನಗತ್ಯ ಬಳಕೆ ನಿಲ್ಲಿಸಿ:** ಬಳಕೆಯಿಲ್ಲದಾಗ ದೀಪಗಳು, ಫ್ಯಾನ್ಗಳು ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಆರಿಸಿ. ಚಾರ್ಜರ್ಗಳು ಮತ್ತು ಸಾಧನಗಳನ್ನು ಬಳಕೆಯ ನಂತರ ಸಾಕೆಟ್ಟಿಂದ ಬೇರ್ಪಡಿಸಿ.

**ಐಇಡಿ ಬಳಸಿ:** ಸಾಮಾನ್ಯ ಬಲ್ಬುಗಳ ಬದಲಿಗೆ ಶಕ್ತಿ ದಕ್ಷತೆಯುಳ್ಳ ಎಲ್‌ಇಡಿ (LED) ದೀಪಗಳನ್ನು

ನೈಸರ್ಗಿಕ ಬೆಳಕು: ಹಗಲಿನಲ್ಲಿ ಸಾಧ್ಯವಾದಷ್ಟು ನೈಸರ್ಗಿಕ ಬೆಳಕು ಮತ್ತು ಗಾಳಿಯನ್ನು ಮುಕ್ತವಾಗಿ

**ಸೌರಶಕ್ತಿ ಅಳವಡಿಕೆ:** ಮೇಲ್ಛಾವಣಿ ಸೌರ (Solar) ವ್ಯವಸ್ಥೆಗಳು ಮತ್ತು ನವೀಕರಿಸಬಹುದಾದ ಶಕ್ತಿ ಮೂಲಗಳನ್ನು ಉತ್ತೇಜಿಸಿ.

ಎಸಿ ತಾಪಮಾನ ನಿಯಂತ್ರಣ: ಏರ್ ಕಂಡೀಷನರ್ಗಳನ್ನು (AC) 24-26"C ತಾಪಮಾನದಲ್ಲಿ ನಿರ್ವಹಿಸಿ.

ವಿದ್ಯುತ್ ಲೆಕ್ಕಪರಿಶೋಧನೆ: ಶಾಲೆ, ಕಾಲೇಜುಗಳು ಮತ್ತು ಕಚೇರಿಗಳಲ್ಲಿ ನಿಯಮಿತವಾಗಿ ವಿದ್ಯುತ್ ಲೆಕ್ಕಪರಿಶೋಧನೆ (Energy Audit) ನಡೆಸಿ.

**ಸಾಮೂಹಿಕ ಜಾಗೃತಿ ಮತ್ತು ಚಟುವಟಿಕೆಗಳು:** ಈ ಬದಲಾವಣೆಗಳು ಕೇವಲ ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗಬಾರದು. ಶಾಲೆ, ಕಾಲೇಜು ಮತ್ತು ಕಚೇರಿಗಳಲ್ಲಿ ಜಲ ಮತ್ತು ವಿದ್ಯುತ್ ಸಂರಕ್ಷಣಾ ಪ್ರತಿಜ್ಞಾ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಮೆರವಣಿಗೆಗಳು, ಬೀದಿ ನಾಟಕಗಳು, ಪೋಸ್ಟರ್ಗಳು ಹಾಗೂ ಬ್ಯಾನರ್ಗಳ ಮೂಲಕ ಜನರಲ್ಲಿ ಅರಿವು ಮೂಡಿಸಬೇಕಿದೆ. ಸಮುದಾಯದ ಭಾಗವಹಿಸುವಿಕೆಯೊಂದಿಗೆ ’ಜಲ ಸಂರಕ್ಷಣಾ ವಾರ’ ಮತ್ತು ’ವಿದ್ಯುತ್ ಸಂರಕ್ಷಣಾ ದಿನ’ಗಳನ್ನು ಆಚರಿಸಿ, ಪ್ರತಿಯೊಬ್ಬರಲ್ಲೂ ಜವಾಬ್ದಾರಿ ಮೂಡಿಸುವುದು ಇಂದಿನ ಅಗತ್ಯವಾಗಿದೆ.

ನೀರನ್ನು ಮಿತವಾಗಿ ಬಳಸಿ, ಪ್ರಕೃತಿಯನ್ನು ರಕ್ಷಿಸಿ. ಇಂದಿನ ವಿದ್ಯುತ್ ಉಳಿತಾಯವೇ, ನಾಳೆಯ ಭವಿಷ್ಯದ ಆಧಾರ

ಸಾರ್ವಜನಿಕರು ಇಂತಹ ಮಿತವ್ಯಯದ ಅಭ್ಯಾಸಗಳನ್ನು ಸ್ವಯಂಪ್ರೇರಿತರಾಗಿ ರೂಢಿಸಿಕೊಳ್ಳುವುದರಿಂದ ನಮ್ಮ ನಾಡಿಗೆ, ದೇಶಕ್ಕೆ ಮತ್ತು ಈ ಒಟ್ಟಾರೆ ಭೂಮಿಗೆ ಒಳಿತಾಗುತ್ತದೆ. ಬನ್ನಿ ಇಂದೇ ಜಲ ಮತ್ತು ವಿದ್ಯುತ್ ಅನ್ನು ಸಂರಕ್ಷಿಸೋಣ. ಆ ಮೂಲಕ ಸುಸ್ಥಿರತೆ, ಸಮೃದ್ಧಿ ಜೀವನಮಟ್ಟವನ್ನು ಖಚಿತಪಡಿಸೋಣ.



ಲೇಖನ
■ ಡಾ. ಶಾಲಿನಿ ರಜನೀಶ್
ಸರ್ಕಾರದ ಮುಖ್ಯ ಕಾರ್ಯದರ್ಶಿ

# ಯಾಳವಾರ: ಪ್ರೌಢಶಾಲೆ ಸುವರ್ಣ ಮಹೋತ್ಸವ ಇಂದು

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ತಾಲ್ಲೂಕಿನ ಯಾಳವಾರ ಗ್ರಾಮದ ಶ್ರೀಸೋಮೇಶ್ವರ ವಿದ್ಯಾವರ್ಧಕ ಸಂಘದ ಪ್ರೌಢಶಾಲೆ ನೂತನ ಕಟ್ಟಡ ಹಾಗೂ ವಿದ್ಯಾರ್ಥಿ ನಿಲಯ ಉದ್ಘಾಟನೆ ಮತ್ತು ಸುವರ್ಣ ಮಹೋತ್ಸವದ ಅಂಗವಾಗಿ ಸ್ಮರಣ ಸಂಚಿಕೆ ಬಿಡುಗಡೆ, ಗುರುವಂದನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಇಂದು(ಭಾನುವಾರ) ಜರುಗಲಿವೆ ಎಂದು ಸಂಸ್ಥೆಯ ಅಧ್ಯಕ್ಷ ರಾಜುಗೌಡ ನಾಡಗೌಡ್ರ ತಿಳಿಸಿದ್ದಾರೆ.

ಗ್ರಾಮದ ಶ್ರೀ ಸೋಮೇಶ್ವರ ವಿದ್ಯಾವರ್ಧಕ ಸಂಘದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿ, ಬಾಳೆಹೊನ್ನೂರ ರಂಭಾಪುರಿ ಜಗದ್ಗುರು ಡಾ.ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ನಡೆಯಲಿವೆ. ಯಾಳವಾರ ಗುರುಮಠದ ದಾರುಕಲಿಂಗಶ್ರೀಗಳು ಹಾಗೂ ಆಲಮೇಲ ಗುರು ಸಂಸ್ಥಾನ ಹಿರೇಮಠದ ಚಂದ್ರಶೇಖರ ಶ್ರೀಗಳು ನೇತೃತ್ವ ವಹಿಸುವವರು. ಹರಳಕಟ್ಟೆಯ ನಿಜಗುಣ ಸ್ವಾಮೀಜಿ, ಕಡಕೋಳ ಸಂಸ್ಥಾನಮಠದ ರಾಜಗುರು ಮಹಾಲಿಂಗ ಸ್ವಾಮಿಜೀ ಉಪಸ್ಥಿತರಿರುವರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ, ಸಂಸದ ರಮೇಶ ಜಿಗಜಿಣಗಿ ಜ್ಯೋತಿ ಬೆಳಗಿಸುವರು. ಕೆ.ಎಸ್.ಐ.ಡಿ.ಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ, ಗಂಗಾವತಿ ಶಾಸಕ ಗಾಲಿ ಜನಾರ್ಧನ ರೆಡ್ಡಿ ಹಾಗೂ ಸ್ಥಳೀಯ ಶಾಸಕ ರಾಜುಗೌಡ ಪಾಟೀಲ (ಕುದರಿಸಾಲವಾಡಗಿ) ಸ್ಮರಣಸಂಚಿಕೆ ಬಿಡುಗಡೆಗೊಳಿಸುವರು.

ಮಾಜಿ ಶಾಸಕರುಗಳಾದ ಎಸ್.ಎಂ.ದೇಸಾಯಿ, ಶರಣಪ್ಪ ಸುಣಗಾರ ಸೇರಿದಂತೆ ರಾಜಕೀಯ ಮುಖಂಡರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ ಗುರುವಂದನೆ ಹಾಗೂ ಹಿರಿಯ ವಿದ್ಯಾರ್ಥಿಗಳ ಸ್ನೇಹ ಸಮಾಗಮ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 1970–2026 ರವರೆಗೆ ಪ್ರಥ-’ಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸನ್ಮಾನ ನಡೆಯಲಿದೆ, ಕಾರ್ಯಕ್ರಮದಲ್ಲಿ ಸ್ವಾಮೀಜಿಗಳು, ಮಾಜಿ ಸಚಿವರು, ಶಾಸಕರು, ವಿ.ಪ ಸದಸ್ಯರು, ರಾಜಕೀಯ ಮುಖಂಡರು, ಸಂಸ್ಥೆಯ ನಿರ್ದೇಶಕ ಮಂಡಳಿ,ವಿವಿಧ ಘಟಕಗಳ ಪದಾಧಿಕಾರಿಗಳ, ಗ್ರಾಮದ ಪ್ರಮುಖರು, ಗಣ್ಯರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು, ಹಳೆವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ನಂತರ ರಾತ್ರಿ ವಿಜಯಪುರದ ಮಂದಾರ ಮೆಲೋಡೀಸ್ ಹಾಗೂ ಅವರಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

# ನಿವೃತ್ತ ಸೈನಿಕ ಕಾಶೀರಾಯ ಸನ್ಮಾನ ಇಂದು

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಸತತ 24 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಎಮ್‌ಎಸಿಪಿ ನಾಯಕ ಸುಭೇದಾರನಾಗಿ ಸೇವೆ ಸಲ್ಲಿಸಿ ನಿವೃತ್ತಿಯ ನಂತರ ಹಂಚಲಿ ಗ್ರಾಮಕ್ಕೆ ಆಗಮಿಸುತ್ತಿರುವ ಕಾಶೀರಾಯ ಕಾಮನಕೇರಿ ಇವರ ಸ್ವಾಗತ ಹಾಗೂ ಸನ್ಮಾನ ಸಮಾರಂಭ ಇಂದು (ಭಾನುವಾರ) ಜರುಗಲಿದೆ.

ತಾಲ್ಲೂಕಿನ ಹಂಚಲಿ ಗ್ರಾಮದ ಹನುಮಾನ ದೇವಸ್ಥಾನ ಆವರಣದಲ್ಲಿ ಮಧ್ಯಾಹ್ನ 2 ಘಂಟೆಗೆ ಆರಂಭಗೊಳ್ಳಲಿರುವ ಕಾರ್ಯಕ್ರಮದ ಸಾನಿಧ್ಯವನ್ನು ತಾಳಿಕೋಟಿ ಖಾಸ್ಗತೇಶ್ವರ ಮಠದ ಸಿದ್ಧಲಿಂಗ ದೇವರು, ಬೋರಗಿ ಪುರದಾಳಮಠದ ಮಹಾಲಿಂಗೇಶ್ವರ ಸ್ವಾಮೀಜಿ ಹಾಗೂ ಸ್ಥಳೀಯ ಶರಣಯ್ಯ ಮಠ ವಹಿಸಲಿದ್ದಾರೆ.

ತಹಶೀಲ್ದಾರ ವಿನಯಾ ಹೂಗಾರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುದ್ದೇಬಿಹಾಳ ಕ್ಷೇತ್ರ ಸಮನ್ವಯ ಅಧಿಕಾರಿ ಆರ್.ಬಿ.ದಮ್ಮೂರಮಠ ಉಪನ್ಯಾಸ ನೀಡಲಿದ್ದಾರೆ.

ಈ ಸಂದರ್ಭದಲ್ಲಿ ಗ್ರಾಮದ ಪಂಚಾಯಿತಿ ಸದಸ್ಯರು, ಹಿರಿಯರು ಭಾಗವಹಿಸಲಿದ್ದಾರೆ ಎಂದು ಮಾಜಿ ಸೈನಿಕರ ಸಂಘ ಹಾಗೂ ಕಾರ್ಗಿಲ್ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಪದವಿ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಇಲಾಖೆ ಹಾಸ್ಟೆಲಗಳಿಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ ನಂತರದ ಬಾಲಕ ಮತ್ತು ಬಾಲಕೀಯರ ವಿದ್ಯಾರ್ಥಿನಿಲಯಗಳಲ್ಲಿ ಪದವಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲು ಆನ ಲೈನ ಅರ್ಜಿ ಅಹ್ವಾನಿಸಲಾಗಿದೆ

ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ ಪ.ಜಾ ಮತ್ತು ಪ.ವರ್ಗದ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2026–27 ನೇ ಸಾಲಿಗೆ ಆನ ಲೈನ ಮೂಲಕ ಪಟ್ಟಣದ ಸತ್ತಿ ರಸ್ತೆಯ ಎಲ್ ಐ ಸಿ ಕಚೇರಿ ಎದುರಿಗೆ ಇರುವ ಮೆಟ್ರಿಕ ನಂತರದ ಬಾಲಕೀಯರ ವಸತಿನಿಲಯ ಅಥಣಿ ಭಾಗ 1 ಮತ್ತು ಪಟ್ಟಣದ ಕನಕ ನಗರ ಸಿಎಸ್ ಕೆ ಪ್ರೌಢ ಶಾಲೆ ಎದುರುಗಡೆ ಇರುವ ಭಾಗ 2 ಹಾಗೂ ಮೆಟ್ರಿಕ ನಂತರದ ಬಾಲಕರ ನಿಲಯ ಕೊಕಟನೂರ ಇಲ್ಲಿಗೆ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ಪ್ರವರ್ಗ–1, ಎಸ್.ಸಿ. ಎಸ್.ಟಿ ರೂ.2.50 ಲಕ್ಷ ಮತ್ತು

ಪ್ರವರ್ಗ– 2ಎ, 2ಬಿ, 3ಎ, 3ಬಿ ಗಳಿಗೆ ರೂ.1.00 ಲಕ್ಷ

ಹೊಸ ವಿದ್ಯಾರ್ಥಿಗಳು ಪ್ರವೇಶ ಕೋರಿ ಅರ್ಜಿ ಸಲ್ಲಿಸಲು ಆನ ಲೈನ ಅರ್ಜಿ ಪ್ರಾರಂಭವಾಗುವ ದಿನಾಂಕ: ಜೂನ 29, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 20.

ಹೆಚ್ಚಿನ ಮಾಹಿತಿಗಾಗಿ ತಾಲೂಕು ಅಧಿಕಾ-ರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥಣಿ ಈ ಕಚೇರಿಗೆ ಸಂಪರ್ಕಿಸಲು ಹಿಂದುಳಿದ ವರ್ಗಗಳ ಇಲಾಖೆಯ ಅಧಿಕಾರಿ ವೆಂಕಟೇಶ ಕುಲಕರ್ಣಿ ಇವರು ಪತ್ರಿಕಾ ಪ್ರಕಟಣೆಯಲ್ಲಿ ಕೋ-ರಿದ್ದಾರೆ

# ತಾಳಿಕೋಟೆ ಪುರಸಭೆಯಿಂದ ಭೀಮನಭಾವಿ ಸ್ವಚ್ಛತೆ

■ ಉದಯರಶ್ಮಿ ದಿನಪತ್ರಿಕೆ



ತಾಳಿಕೋಟೆ: ಪಟ್ಟಣದ ರಾಜವಾಡೆಯಲ್ಲಿರುವ ಪುರಾತನ ಭಾವಿಯಾದ ಭೀಮನಭಾವಿಯನ್ನು ಪುರಸಭೆ ವತಿಯಿಂದ ಶನಿವಾರರಂದು ಸ್ವಚ್ಛತಾ ಕಾರ್ಯವನ್ನು ಆರಂಬಿಸಲಾಯಿತು.

ತಾಳಿಕೋಟೆ ಪಟ್ಟಣದಲ್ಲಿ ಇದೇ ದಿ.17 ರಿಂದ ಪ್ರಾರಂಭಗೊಳ್ಳಲಿರುವ ಶ್ರೀ ಗ್ರಾಮದೇವತೆ ದ್ಯಾವವ್ವದೇವಿಯ ಜಾತ್ರಾ ಮಹೋತ್ಸವ ಹಾಗೂ ದಿ. 19 ರಿಂದ ಪ್ರಾರಂಭಗೊಳ್ಳಲಿರುವ ಶ್ರೀ ಖಾಸ್ಗತೇಶ್ವರ ಜಾತ್ರಾ ಮಹೋತ್ಸವದಲ್ಲಿ ಇದೇ ಪುರಾತನ ಭೀಮನಭಾವಿಯಲ್ಲಿ ಗಂಗಸ್ಥಳ ಹಾಗೂ ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರುವದರಿಂದ ಈ ಪುರಾತನ ಭೀಮನಭಾವಿಯನ್ನು ಸ್ವಚ್ಛತೆ ಕೈಗೊಳ್ಳಲಾಗುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ ಅವರು ತಿಳಿಸಿದರು.

ಭಾವಿಯಲ್ಲಿ ಬಿದ್ದ ಕಲ್ಲು, ಮಣ್ಣು, ಚಿಪ್ಪು ಅಲ್ಲದೇ ಬೆಳೆದ ಮುಳ್ಳಿನ ಗಿಡಗಂಟಿಗಳನ್ನು ಕತ್ತರಿಸಲಾಗಿದೆ. ಭಾವಿಯಲ್ಲಿಯ ನೀರಿನ ಸ್ವಚ್ಛತೆಗೆ ಬ್ಲಿಚಿಂಗ್ ಪೌಡರ್ ಬಳಿಸಿ ಭಾವಿಗೆ ಗಂಗಸ್ಥಳಕ್ಕೆ ಆಗಮಿಸುವ ಭಕ್ತ-ರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಅದರಂತೆ ರಾಜವಾಡೆಯಲ್ಲಿ ಕೆಲವೆಡೆ ನೀರು ನಿಂತುಕೊಳ್ಳುವದನ್ನು ತಡೆಯಲು ಸಿಮೇಂಟ್ ಕಾಂಕ್ರೇಟ್‌ನಿಂದ ನೀರು ಚರಂಡಿಗೆ ಹರಿದು ಹೋಗುವಂತೆ ಅಲ್ಲದೇ ಚರಂಡಿಗಳ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಮೆರವಣಿಗೆಯ ದಾ-ರಿಯುದ್ದಕ್ಕೂ ರಸ್ತೆ ಚರಂಡಿ ದುರಸ್ಥಿಯ ಜೊತೆಗೆ ಹೆಚ್ಚಿನ ರೀತಿಯಲ್ಲಿ ಸ್ವಚ್ಛತೆಗೆ ಸಿಬ್ಬಂದಿಗಳನ್ನು ನಿಯೋಜಿಸುವ ಕುರಿತು ತಯಾರಿ ಮಾಡಿಕೊಳ್ಳಲಾಗಿದೆ. ಈ ಭಾರಿ ಶ್ರೀ ಗ್ರಾಮದೇವತೆ ಹಾಗೂ ಶ್ರೀ ಖಾಸ್ಗತೇಶ್ವರ ಜಾತ್ರೋತ್ಸವ ಒಟ್ಟಿಗೆ ಬಂದಿರುವದರಿಂದ ಸುಮಾರು 15 ದಿನಗಳ ಕಾಲ ಜಾತ್ರಾ ವೈಭವ ಪಟ್ಟಣದಲ್ಲಿ ಇರುವದರಿಂದ ಜಾತ್ರೋತ್ಸವದಲ್ಲಿ ಲಕ್ಷಾಂತರ ಜನರು ಆಗಮಿಸುತ್ತಾರೆ ಹೀಗಾಗಿ ಪಟ್ಟಣದ ಸಂದರ್ಯಕರಣಕ್ಕೆ ಹೆಚ್ಚಿನ ಆದ-’ೃತೆ ನೀಡಲಾಗುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ ಅವರು ತಿಳಿಸಿದರು.

ಈ ಸಮಯದಲ್ಲಿ ಪುರಸಭೆ ಆರೋಗ್ಯ ನಿರಕ್ಷಕರಾದ ಫೀರೋಜ ಮುಲ್ಲಾ, ಶಿವಾನಂದ ಜುಮನಾಳ, ಸಿದ್ದು ಕೊಳ್ಳಿ, ಮೊದಲಾದವರು ಇದ್ದರು.

# ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗುವವರೇ ಶಿಕ್ಷಕರು

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಜೀವನದ ಮೌಲ್ಯಗಳ ಮೂಲಕ ಆತ್ಮವಿಶ್ವಾಸ ಬೆಳೆಸಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗುವವರೇ ಶಿಕ್ಷಕರು ಅಥ-ರ್ಾತ ಗುರುಗಳು ಎಂದು ನಿವೃತ್ತ ತಹಶೀಲ್ದಾರ ಆರ್.ಆರ್,ಮಣೂರ ಹೇಳಿದರು.

ಪಟ್ಟಣದ ಗೆಳೆಯರ ಬಳಗದಿಂದ ಶನಿವಾರ ಬಿಎಲ್‌ಡಿಇ ಸಂಸ್ಥೆಯ ದೇವರಹಿಪ್ಪರಗಿ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ ಕಾರ್ಯನಿರ್ವಹಿಸಿ 39 ವರ್ಷಗಳ ಹಿಂದೆ ನಿವೃತ್ತರಾದ ಬಿ.ಎಸ್.ಪಾಟೀಲ (ಜಾಲವಾದ) ರವರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಮಾನವನ ಜೀವನದಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈಗಲೂ ತಮ್ಮ 99 ನೇ ವಯಸ್ಸಿನಲ್ಲಿ ಚಟುವಟಿಕೆಯಿಂದ ಇದ್ದು ಎಲ್ಲ-ರಿಗೂ ಮಾರ್ಗದರ್ಶನ ನೀಡುವ ಗುರುಗಳ ಸಾಧನೆ ನಿಜವಾಗಿಯೂ ಇಂದಿನ ಎಲ್ಲರಿಗೂ ಆದರ್ಶಪ್ರಾಯ ಎಂದರು.

ಸನ್ಮಾನಿತ ಬಿ.ಎಸ್.ಪಾಟೀಲ ಶಿಕ್ಷಕರು ಮಾತನಾಡಿ, ತಾವು ಕಲಿಸಿದ ವಿದ್ಯಾರ್ಥಿಗಳು ಇಂದು ತಾವು ಸಹ ನಿವೃತ್ತರಾಗಿ ನಂತರ ನಿವೃತ್ತ ಗುರುವನ್ನು ಸನ್ಮಾನಿಸಿದ್ದು ಇದು ಅತ್ಯಂತ ಸಂತೋಷಕರ ಹಾಗೂ ವಿರಳ ಸಂದರ್ಭ. ಇದು ಎಲ್ಲರಿಗೂ ದೊರೆಯದು. ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು.

ಬಸವಶರಣ ಸಂಗಮ ಸೇವಾ ಸಮಿತಿ ಅಧ್ಯಕ್ಷ ಸಂಗಪ್ಪ ತಡವಲ್, ನಿವೃತ್ತ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಕೆ.ಕುದರಿ, ನಿವೃತ್ತ ಕೃಷಿ ಅಧಿಕಾರಿ ಮಡಿವಾಳಯ್ಯ ಬುದ್ನಿಮಠ, ಕಾಶೀಪತಿ ದೇವಣಗಾಂವ, ಎಸ್.ಕೆ.ಪೋಲೇಶಿ, ಸಂಗಮೇಶ ಪಾಟೀಲ ಇದ್ದರು.

# ಯುಪಿಎಸ್‌ಸಿ ಪರೀಕ್ಷೆಯ ತರಬೇತಿಗಾಗಿ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27ನೇ ಸಾಲಿನಲ್ಲಿ ಯುಪಿಎಸ್‌ಸಿ ಮುಖ್ಯ ಪರೀಕ್ಷಾ ತರಬೇತಿ ಪಡೆಯಲು ಅಲ್ಪ ಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಬೆಂಗಳೂರಿನ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ತರಬೇತಿ ನೀಡಲಾಗುವುದು. ಈ ತರಬೇತಿಗೆ ಅಲ್ಪ ಸಂಖ್ಯಾತರ ಸಮುದಾಯದ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಜು.10 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸುವವರು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅಲ್ಪಸಂಖ್ಯಾತರ ಸಮುದಾಯದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ), ಅಭ್ಯರ್ಥಿಯು ಯುಪಿಎಸ್‌ಸಿ 2006–27ನೇ ಸಾಲಿನ ಅಧಿಸೂಚನೆಯ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಈ ಅರ್ಹತೆಗಳಿರುವ ಅರ್ಜಿದಾರರು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಾಲತಾಣ :https://dom.karnataka.gov.in/ Googlelink ttps://forms.gle/hjnh&Hwp@uTHyYme ಇಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಮಾರ್ಗ ಸೂಚಿಗಳನ್ನಯ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಜಯಪುರ ಕಚೇರಿಗೆ ಮತ್ತು ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ ಮಾಹಿತಿಯನ್ನು ಪಡೆಯಬಹುದು ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ :8277799990 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾ-ರಿಗಳ ಪ್ರಕಟಣೆ ತಿಳಿಸಿದೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR